ಈ ವರದಿಯ ಜೊತೆಯಲ್ಲಿರುವ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ (ನಿಗಮ) 31 ಮಾರ್ಚ್ 2018ರಲ್ಲಿದ್ದಂತೆ ಆಸ್ತಿ–ಜವಾಬ್ದಾರಿ ತ:ಖ್ತೆ, ಅದೇ ದಿನಾಂಕಕ್ಕೆ ಅಂತ್ಯಗೊಂಡಂತಹ ಸಾಲಿಗೆ ಲಾಭ ಮತ್ತು ನಷ್ಟ ತ:ಖ್ತೆ, ನಗದು/ಹಣಕಾಸು ಹರಿವಿನ ತ:ಖ್ತೆ ಹಾಗೂ ಗಮನಾರ್ಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಒಂದು ಸಂಕ್ಷಿಪ್ತ ವರದಿ ಹಾಗೂ ಇತರೆ ವಿವರಣಾ ಮಾಹಿತಿಗಳನ್ನು ಒಳಗೊಂಡಂತೆ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ನಾವು ಲೆಕ್ಕಪರಿಶೋಧನೆ ಮಾಡಿರುವೆವು.

ಹಣಕಾಸು ತ:ಖ್ತೆಗಳ ತಯಾರಿಕೆಗೆ ಸಂಬಂಧಿಸಿದಂತೆ ವ್ಯವಸ್ಥಾಪನೆಯ ಜವಾಬ್ದಾರಿ

ಕಂಪನಿಗಳ ನಿಯಮಗಳು, 2013ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ ಪರಿಚ್ಛೇದ 134(5)ರಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಹಾಗೂ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಅನುಸರಿಸಿದಂತೆ ನಿಗಮದ ಹಣಕಾಸಿನ ಸ್ಥಿತಿಗತಿ, ಹಣಕಾಸಿಗೆ ಸಂಬಂಧಿತ ಕಾರ್ಯನಿರ್ವಹಣೆ ಹಾಗೂ ಹಣಕಾಸಿನ ಹರಿವಿನ ಒಂದು ಸತ್ಯಾಸತ್ಯತೆಯಿಂದ ಕೂಡಿದಂತಹ ಹಾಗೂ ನ್ಯಾಯಸಮ್ಮತ ಅಭಿಪ್ರಾಯವನ್ನು ನೀಡುವ ರೀತಿಯಲ್ಲಿ ಈ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವುದಕ್ಕೆ ಸಂಬಂಧಿಸಿದಂತೆ ನಿಗಮದ ನಿರ್ದೇಶಕರುಗಳ ಮಂಡಳಿಯು ಜವಾಬ್ದಾರಿಯುತವಾಗಿರುತ್ತದೆ. ಈ ಜವಾಬ್ದಾರಿಯು ಒಂದು ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ ಹಾಗೂ ವಂಚನೆಗಳು ಅಥವಾ ತಪ್ಪುಗಳನ್ನು ಎಸಗುವುದರ ಕಾರಣ ವಿಷಯಕ ತಪ್ಪು ಹೇಳಿಕೆಗಳಿಂದ ಹೊರತಾದ ಹಣಕಾಸಿನ ತ:ಖ್ತೆಗಳನ್ನು ತಯಾರಿಸುವ ಹಾಗೂ ಮಂಡಿಸುವುದಕ್ಕೆ ಸೂಕ್ತವಾದಂತಹ ನಿಗಮದ ಆಸ್ತಿಗಳ ಸಂರಕ್ಷಣೆಗಾಗಿ ಅಧಿನಿಯಮದ ಅನುವುಗಳ ಅನುಸಾರ ಸಮರ್ಪಕವಾದ ರೀತಿಯಲ್ಲಿ ಲೆಕ್ಕಪತ್ರಗಳ ನಿರ್ವಹಣೆಗಾಗಿ ಹಾಗೂ ವಂಚನೆಗಳನ್ನು ತಡೆಯುವುದು ಮತ್ತು ಪತ್ತೆಹಚ್ಚುವುದು, ಒಂದು ಸೂಕ್ತ ಲೆಕ್ಕವನ್ನಿಡುವಿಕೆಯ ಕಾರ್ಯನೀತಿಯ ಆಯ್ಕೆ ಹಾಗೂ ಅದನ್ನು ಅನ್ವಯಗೊಳಿಸುವುದು, ನ್ಯಾಯಸಮ್ಮತತೆಯಿಂದ ಮತ್ತು ವಿವೇಚನೆಯಿಂದ ಕೂಡಿದ ತೀರ್ಮಾನಗಳನ್ನು ಕೈಗೊಳ್ಳುವುದು ಹಾಗೂ ಅಂದಾಜುಗಳನ್ನು ಮಾಡುವುದು ಹಾಗೂ ಸಮರ್ಪಕವಾದ ರೀತಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಕಾರ್ಯಗತಗೊಳಿಸುವಿಕೆ, ಹಾಗೂ ನಿರ್ವಹಣೆ, ಇವುಗಳನ್ನೂ ಕೂಡ ಒಳಗೊಂಡಿದೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಈ ಹಣಕಾಸು ತ:ಖ್ತೆಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಅಧಿನಿಯಮದ ಅನುವುಗಳು, ಲೆಕ್ಕವನ್ನಿಡುವಿಕೆಯ ಹಾಗೂ ಲೆಕ್ಕಪರಿಶೋಧನೆಯ ಮಾನದಂಡಗಳು ಹಾಗೂ ಅಧಿನಿಯಮ ಹಾಗೂ

ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅನುವುಗಳ ಅನುಸಾರ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಅಗತ್ಯವಿರುವ ವಿಷಯಗಳನ್ನು ನಾವು ಗಣನೆಗೆ ತೆಗೆದುಕೊಂಡಿರುವೆವು.

ಅಧಿನಿಯಮದ ಪರಿಚ್ಛೇದ 143 (10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹೊಂದಿರುತ್ತವೆ.

ಪ್ರತ್ಯೇಕ ಹಣಕಾಸು ತ:ಖ್ತೆಗಳಲ್ಲಿ ತೋರಿಸಿರುವ ಮೊತ್ತಗಳು ಹಾಗೂ ಬಹಿರಂಗಪಡಿಸಿರುವಿಕೆಗಳ ಬಗ್ಗೆ ಲೆಕ್ಕಪರಿಶೋಧನೆಗೆ ಅಗತ್ಯವಿರುವ ದಾಖಲೆಗಳ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವ ಸಲುವಾಗಿ ಕಾರ್ಯವಿಧಾನಗಳನ್ನು ನಡೆಸುವುದನ್ನು ಲೆಕ್ಕಪರಿಶೋಧನೆಯು ಒಳಗೊಂಡಿದೆ. ಆಯ್ಕೆಮಾಡಿಕೊಳ್ಳಲಾದ ಕಾರ್ಯವಿಧಾನವು ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣವಾಗಿರಲಿ ಅಥವಾ ತಪ್ಪುಗಳನ್ನು ಎಸಗುವ ಕಾರಣಗಳಿಂದಾಗಿರಲೀ ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ. ಅಂತಹ ಸಂಭಾವ್ಯ ಅಪಾಯಗಳ ನಿರ್ಧಾರಣೆ ಮಾಡುವಲ್ಲಿ, ಪ್ರಸ್ತುತ ಸಂದರ್ಭದಲ್ಲಿ ಸೂಕ್ತವಾಗಬಹುದಾದಂತಹ ಲೆಕ್ಕಪರಿಶೋಧನಾ ಕಾರ್ಯವಿಧಾನವನ್ನು ರೂಪಿಸುವ ಉದ್ದೇಶದಿಂದ, ಹಣಕಾಸು ತ:ಖ್ತೆಗಳ ನ್ಯಾಯಸಮ್ಮತ ಮಂಡಿಸುವಿಕೆಗೆ ನಿಗಮದ ಸಿದ್ಧತೆಗೆ ಸೂಕ್ತವೆನಿಸುವ, ಆಂತರಿಕ ನಿಯಂತ್ರಣವನ್ನು ಲೆಕ್ಕಪರಿಶೋಧಕರು ಪರಿಗಣಿಸುತ್ತಾರೆ. ಒಂದು ಲೆಕ್ಕಪರಿಶೋಧನೆಯು ಬಳಸಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡುವುದನ್ನು ಹಾಗೂ ನಿಗಮದ ನಿರ್ದೇಶಕರು ಮಾಡಿದ್ದಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಅಂದಾಜುಗಳ ನ್ಯಾಯಸಮ್ಮತತೆಯನ್ನು ಹಾಗೂ ಅಲ್ಲದೇ ಹಣಕಾಸು ತ:ಖ್ತೆಗಳ ಒಟ್ಟಾರೆ ಮಂಡನೆಯನ್ನು ಮೌಲ್ಯಮಾಪನ ಮಾಡುವುದನ್ನೂ ಕೂಡ ಒಳಗೊಂಡಿರುತ್ತದೆ.

ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳು ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಒಂದು ಆಧಾರವನ್ನು ಒದಗಿಸುವುದಕ್ಕಾಗಿ ಸಮರ್ಪಕವಾಗಿವೆ ಹಾಗೂ ಸೂಕ್ತವಾಗಿವೆ ಎಂಬ ವಿಶ್ವಾಸವು ನಮಗಿದೆ.

ನಮ್ಮ ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರಗಳು:

1. ನಿಗಮವು ವಿಮಾಗಣಿತ ಆಧಾರದಲ್ಲಿ ಲೆಕ್ಕಹಾಕುವುದರೊಂದಿಗೆ ರಜೆ ನಗದೀಕರಣ ಮತ್ತು ಗ್ರಾಚುಯಿಟಿಗಳಿಗೆ ಸಂಬಂಧಿಸಿದಂತೆ ಅನುವನ್ನು ಮಾಡಿರುವುದಿಲ್ಲ, ಇದು ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ–15ರ ಅನುವುಗಳ ಉಲ್ಲಂಘನೆಯಾಗಿರುತ್ತದೆ. ವಿಮಾಗಣಿತ ಆಧಾರದಲ್ಲಿ ಲೆಕ್ಕಹಾಕುವಲ್ಲಿನ ಅನುಪಸ್ಥಿತಿಯಲ್ಲಿ, ಅಂತಹ ಅನುವು ಸಮರ್ಪಕವಾಗಿರುವುದೇ ಅಥವ ಇಲ್ಲವೇ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯವನ್ನು ತಿಳಿಸಲು ನಮಗೆ ಸಾಧ್ಯವಾಗುವುದಿಲ್ಲ.

2. ಗ್ರಾಚುಯಿಟಿಗಾಗಿ ಅನುವು ಹಾಗೂ ಗ್ರಾಚುಯಿಟಿಗೆ ಸಂಬಂಧಿತ ಬಹಿರಂಗಪಡಿಸುವಿಕೆಯು ಜೀವ ವಿಮಾ ನಿಗಮವು ಒದಗಿಸಿರುವ ಮೌಲ್ಯಮಾಪನದ ಅನುಸಾರ ಆಗಿರುತ್ತದೆ, ಅದಕ್ಕಾಗಿ ನಿಗಮವು ಜೀವ ವಿಮಾ ನಿಗಮದಿಂದ ವಿಮಾ ಪಾಲಿಸಿಯನ್ನು ಹೊಂದಿರುವುದು, ಆದಾಗ್ಯೂ, ಲೆಕ್ಕವನ್ನಿಡುವುದಕ್ಕೆ

ಸಂಬಂಧಿತ ಮಾನದಂಡ–15ರ ಅನುವುಗಳ ಅಗತ್ಯತೆಯಂತೆ ಜೀವ ವಿಮಾ ನಿಗಮವು ಅಂತಹ ಮೌಲ್ಯಮಾಪನದ ಬಗ್ಗೆ ಪ್ರಮಾಣೀಕರಿಸಿರುವುದಿಲ್ಲ.

3. ನಿಗಮವು 31 ಮಾರ್ಚ್ 2014ರವರೆಗೆ ಬಂಡವಾಳೀಕರಿಸಿದಂತಹ ಆಸ್ತಿಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಅಧಿನಿಯಮ 2013ರ ಷೆಡ್ಯೂಲು ಖಖರ ಅಗತ್ಯತೆಗಳ ಅನುಸಾರ ಸವಕಳಿಯನ್ನು ಅನುಸರಿಸಿಲ್ಲ. ಈ ಕಾರಣದಿಂದ ಲೆಕ್ಕಪತ್ರಗಳ ಮೇಲೆ ಆಗಬಹುದಾದಂತಹ ಪ್ರಭಾವವನ್ನು ಪರಿಮಾಣೀಕರಿಸಲು ಸಾಧ್ಯವಿಲ್ಲ.

4. ನಿಗಮವು ಕೇಂದ್ರ ಕಚೇರಿ ಹಾಗೂ ಸುವರ್ಣ ರಥ (ಗೋಲ್ಡನ್ ಚಾರಿಯಟ್) ಇವುಗಳನ್ನು ಹೊರತುಪಡಿಸಿದಂತೆ ಎಲ್ಲಾ ಘಟಕಗಳಿಗೆ ಸಂಬಂಧಿಸಿದಂತೆಯೂ 31 ಮಾರ್ಚ್ 2018ರಲ್ಲಿದ್ದಂತೆ ಸ್ಥಿರಾಸ್ತಿಗಳ ಭೌತಿಕ ಪರಿಕ್ಷಣೆಯನ್ನು ನಡೆಸಿದೆ. ನಿಗಮವು ಸ್ಥಿರಾಸ್ತಿಗಳ ವಹಿಯನ್ನು ನಿರ್ವಹಿಸದೇ ಇರುವುದರಿಂದ, ದುರ್ಬಲಗೊಂಡಿರುವವು ಯಾವುದಾದರೂ ಇದ್ದಲ್ಲಿ, ಅವುಗಳನ್ನೂ ಒಳಗೊಂಡಂತೆ ಸ್ಥಿರಾಸ್ತಿಗಳ ಭೌತಿಕ ಪರೀಕ್ಷಣೆಯ ಕಾರಣ ಉದ್ಭವಿಸಬಹುದಾದಂತಹ ವ್ಯತ್ಯಾಸಗಳನ್ನು ಸೂಕ್ತವಾಗಿ ವ್ಯವಹರಿಸಲಾಗಿದೆಯೇ ಎಂಬುದರ ಬಗ್ಗೆ ನಾವು ಟೀಕೆಟಿಪ್ಪಣಿ ಮಾಡಲು ಸಾಧ್ಯವಾಗಲಿಲ್ಲ. ಈ ಕಾರಣದಿಂದ ಲೆಕ್ಕಪತ್ರಗಳ ಮೇಲೆ ಆಗಬಹುದಾದಂತಹ ಪ್ರಭಾವವನ್ನು ಪರಿಮಾಣೀಕರಿಸಲು ಸಾಧ್ಯವಿಲ್ಲ.

5. ನಿಗಮವು ಕೇಂದ್ರ/ರಾಜ್ಯ ಸರ್ಕಾರದಿಂದ ಸ್ವೀಕರಿಸಿದ ಅನುದಾನಗಳ ಮೊತ್ತಗಳನ್ನು ಒಂದು ಸಾಮಾನ್ಯ ಖಾತೆಯಲ್ಲಿ ಒಟ್ಟುಗೂಡಿಸಲಾಗುತ್ತಿದ್ದು, ಅಲ್ಲಿಂದ ವೆಚ್ಚಗಳನ್ನು ಭರಿಸಲಾಗುತ್ತಿದ್ದು, ಬಾಬುವಾರು ಹಣ ಬಳಕೆಯ ಮಾಹಿತಿಯು ಲಭ್ಯವಿರುವುದಿಲ್ಲ.

6. ನಂದಿ ಬೆಟ್ಟಗಳಲ್ಲಿ ಅನುದಾನಗಳ ಪೈಕಿಯಿಂದ ಹೋಟೆಲು ಯೋಜನೆಗಳ ನಿರ್ಮಾಣವನ್ನು ಸರ್ಕಾರವು ನಿಗಮಕ್ಕೆ ವಹಿಸಿತು, ಈ ಯೋಜನೆಗಳಿಗೆ ಸಂಬಂಧಿಸಿದಂತೆ ಪ್ರಸಕ್ತ ಸಾಲಿನಲ್ಲಿ ರೂ.1,59,33,045/–ರಷ್ಟು ಮೊತ್ತವನ್ನು ಬಂಡವಾಳೀಕರಿಸಲಾಗಿರುವುದು ಹಾಗೂ ಕೊಡಚಾದ್ರಿಯ ಯೋಜನೆಗಳಿಗೆ ಸಂಬಂಧಿಸಿದಂತೆ ರೂ.3,74,26,952/–ರಷ್ಟು ಮೊತ್ತವನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳ ಅಡಿಯಲ್ಲಿ ತೋರಿಸಲಾಗಿರುವುದುನಮಗೆ ದೊರಕಿರುವ ಮಾಹಿತಿಯಂತೆ ಮತ್ತು ನಮಗೆ ನೀಡಲಾಗಿರುವಂತಹ ವಿವರಣೆಗಳಂತೆ, ಸಂಬಂಧಿತ ಭೂಮಿಗಳ ಹಕ್ಕು ಪತ್ರಗಳು ನಿಗಮದ ಹೆಸರಿನಲ್ಲಿರುವುದಿಲ್ಲ. ರ್ಮಾಣವು ಮುಕ್ತಾಯಗೊಂಡನಂತರ ಆಸ್ತಿಗಳ ಅಂತಿಮ ಹಕ್ಕು ಪತ್ರಗಳ ಬಗ್ಗೆ ಸ್ಪಷ್ಟತೆಯಿರುವುದಿಲ್ಲ.

7. ನಿಗಮವು, ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ–22ರ ಅನುವುಗಳ ಅಗತ್ಯತೆಯಂತೆ ಮುಂದೂಡಲ್ಪಟ್ಟಿರುವ ತೆರಿಗೆ ಪಾವತಿಗಳನ್ನು ಪರಿಗಣಿಸಿರುವುದಿಲ್ಲ. ಅದರ ಬಗ್ಗೆ ನಿಗಮವು ಖಚಿತಪಡಿಸಿಕೊಂಡಿರುವುದಿಲ್ಲವಾದ್ದರಿಂದ, ಹಣಕಾಸು ತ:ಖ್ತೆಗಳ ಅದು ಭೀರಬಹುದಾದ ಪರಿಣಾಮವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

8. ಟಿಪ್ಪಣಿ ಸಂಖ್ಯೆ 29ರ ಅಡಿಯಲ್ಲಿ ತೋರಿಸಲಾಗಿರುವ ರೂ.1,424.45 ಲಕ್ಷ ಮೊತ್ತದಷ್ಟು ಒಟ್ಟಾರೆ ಆಕಸ್ಮಿಕ ಜವಾಬ್ದಾರಿಗಳ ಪೈಕಿ, ಹಳೆಯ ಬಾಕಿಯಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ 31 ಮಾರ್ಚ್ 2018ರಲ್ಲಿದ್ದಂತೆ ರೂ.682.64 ಲಕ್ಷ ಮೊತ್ತದಷ್ಟರ ಮಟ್ಟಿಗೆ ಯಾವುದೇ ಬೆಂಬಲಿತ ಸಾಕ್ಷಾಧಾರಗಳು/ದಾಖಲೆಗಳು ಲಭ್ಯವಿರುವುದಿಲ್ಲ, ಅವುಗಳ ಅನುಪಸ್ಥಿತಿಯಲ್ಲಿ ಅಂತಹವುಗಳನ್ನು ಆಕಸ್ಮಿಕ

ಜವಾಬ್ದಾರಿಗಳೆಂಬುದಾಗಿ ಮುಂದುವರೆಸಿಕೊಂಡು ಹೋಗುವ ಅಗತ್ಯತೆಯನ್ನು ನಾವು ನಿರ್ಧಾರಣೆ ಮಾಡಲು ಸಾಧ್ಯವಾಗಲಿಲ್ಲ.

9. ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ಸಮೀಕ್ಷಿಸಲಾಗಿ, ಷೆಡ್ಯೂಲು – **III** ರ ಅನುವುಗಳನ್ನು ಅಳವಡಿಸಿಕೊಳ್ಳಲಾಗಿದ್ದಿತಾದರೂ, ಷೆಡ್ಯೂಲು – **II** ರ ಅಗತ್ಯತೆಗಳನ್ನು ಸಂಪೂರ್ಣವಾಗಿ ಪೂರೈಸಲಾಗಿದ್ದಿತು, ಈ ನಿಟ್ಟಿನಲ್ಲಿ ಗಮನಿಸಲಾದಂತಹ ನಿರ್ದಿಷ್ಟ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ :

ಎ. ಟಿಪ್ಪಣಿ ಸಂಖ್ಯೆ 5.1 (ಬಿ) ಅಡಿಯಲ್ಲಿ ಸಂಪೂರ್ಣವಾಗಿ ತೋರಿಸಲಾಗಿರುವಂತಹ ದೀರ್ಘಾವಧಿ ಸಾಲಗಳು, ಕರ್ನಾಟಕ ಸರ್ಕಾರದ ವಿವಿಧ ಸಂಸ್ಥೆಗಳಿಂದ ಪಡೆದುಕೊಳ್ಳಲಾಗಿರುವಂತಹ ರೂ.4.00 ಕೋಟಿ ಮೊತ್ತವನ್ನು ಒಳಗೊಂಡಿರುವುದು, ಈ ಮೊತ್ತವು ಮರುಪಾವತಿ ಷರತ್ತುಗಳ ಪ್ರಕಾರ ಮರುಪಾವತಿಗಾಗಿ ನಿಗದಿಯಾಗಿದ್ದ ದಿನಾಂಕವು ಮುಕ್ತಾಯಗೊಂಡು ಬಹಳ ಕಾಲವಾಗಿದ್ದಿತು ಮತ್ತು ಆದ್ದರಿಂದ ಈ ಸಾಲದ ಮೊತ್ತವನ್ನು ಅಲ್ಪಾವಧಿ ಸಾಲಗಳು ಎಂಬುದಾಗಿ ವರ್ಗೀಕರಿಸಬೇಕಿದ್ದಿತು.

ಬಿ. ಚಾಲ್ತಿಯೇತರ ಜವಾಬ್ದಾರಿಗಳು ರೂ.5,27,88,715/– ಮೊತ್ತದಷ್ಟು ಇತರೆ ದೀರ್ಘಾವಧಿ ಜವಾಬ್ದಾರಿಗಳನ್ನು ಒಳಗೊಂಡಿರುತ್ತವೆ. ನಿಗಮವು ಚಾಲ್ತಿ ಜವಾಬ್ದಾರಿಗಳು ಎಂಬುದಾಗಿ ವರ್ಗೀಕರಿಸಬೇಕಿದ್ದಂತಹ 1 ವರ್ಷದ ಒಳಗೆ ಮರುಪಾವತಿಸಲು ಬಾಕಿಯಿದ್ದ ವೈಯಕ್ತಿಕ ಬಾಬುಗಳನ್ನು ಗುರುತಿಸಿರಲಿಲಲ್ಲ.

10. ಚಾಲ್ತಿ ಆಸ್ತಿಗಳು – ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು 1 ವರ್ಷಕ್ಕಿಂತಲೂ ಅಧಿಕ ಅವಧಿಯಿಂದ ಬಾಕಿ ಇರುವ ವಿವಿಧ ಮುಂಗಡಗಳ ಕಡೆಗೆ ರೂ.20,12,892/–ರಷ್ಟು ಮೊತ್ತವನ್ನು ಒಳಗೊಂಡಿದೆ. ನಿಗಮವು ಮುಂಗಡವನ್ನು ಹೊಂದಾಣಿಕೆ ಮಾಡಿರಲಿಲ್ಲವಾದ್ದರಿಂದ ಅಥವಾ ವೆಚ್ಚಗಳಿಗೆ ಅನುವು ಮಾಡಿರಲಿಲ್ಲವಾದ್ದರಿಂದ, ವೆಚ್ಚಗಳನ್ನು ಹೊಂದಾಣಿಕೆ ಮಾಡಬಹುದಾಗಿದ್ದ ಮೊತ್ತದಷ್ಟರ ಮಟ್ಟಿಗೆ ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿರುವುದು.

11. ಸರ್ಕಾರದಿಂದ ಪಡೆಯಲಾಗಿರುವ ಸಾಲಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾಗಿರುವವುಗಳು, ಇತರೆ ಚಾಲ್ತಿ ಜವಾಬ್ದಾರಿಗಳು, ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾಗಿರುವವುಗಳು ಮತ್ತಿತರ ಚಾಲ್ತಿ ಆಸ್ತಿಗಳು, ಇವುಗಳಿಗೆ ಸಂಬಂಧಿಸಿದಂತೆ ಶಿಲ್ಕುಗಳನ್ನು ಖಚಿತಪಡಿಸಿಕೊಳ್ಳುವಲ್ಲಿನ ಅನುಪಸ್ಥಿತಿ ಹಾಗೂ ತತ್ಪರಿಣಾಮವಾಗಿ, ಇವುಗಳ ಸಮನ್ವಯತೆಯ ಮೇಲೆ ಲಾಭ/ನಷ್ಟ ಮತ್ತು ಆಸ್ತಿಗಳು/ಜವಾಬ್ದಾರಿಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳು ಯಾವುದಾದರೂ ಇದ್ದಲ್ಲಿ, ಅವುಗಳನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

12. ಚಾಲ್ತಿಯದಲ್ಲದ ಆಸ್ತಿಗಳ ಅಡಿಯಲ್ಲಿ (ಟಿಪ್ಪಣಿ ಸಂಖ್ಯೆ 14.2) ಕಂಡುಬರುವಂತೆ 2003–04 (2004–05 ಕರನಿರ್ಧಾರಣಾ ವರ್ಷ) ಹಣಕಾಸು ಸಾಲಿಗೆ ಸಂಬಂಧಿಸಿದ್ದ ರೂ.7,93,164/–ರಷ್ಟು ಮೊತ್ತದ ವರಮಾನ ತೆರಿಗೆ ಮರುಪಾವತಿಯು ಬಹಳ ವರ್ಷಗಳಿಂದ ಬಾಕಿಯಿದ್ದು, ಅದಕ್ಕಾಗಿ ಯಾವುದೇ ಅನುವನ್ನು ಮಾಡಿರುವುದಿಲ್ಲ.

13. ನಮಗೆ ವಿವರಿಸಿರುವಂತೆ, ನಿಗಮವು, ಭಾರತ ಸರ್ಕಾರದ ಸಾಂಸ್ಕೃತಿಕ ಮಂತ್ರಾಲಯದಿಂದ ರೂ.34.88 ಕೋಟಿ ಮೊತ್ತದಷ್ಟು ಕೆಲವು ಹಣಕಾಸನ್ನು ಈ ಹಿಂದಿನ ಸಾಲುಗಳಲ್ಲಿ ಪಡೆದುಕೊಂಡಿದ್ದಿತು. ಆ ಪೈಕಿ ಅಸಲು ಮೊತ್ತವನ್ನು 2013–14ರಲ್ಲಿ ಭಾರತ ಸರ್ಕಾರಕ್ಕೆ ಮರುಪಾವತಿಸಲಾಗಿದ್ದಿತು ಹಾಗೂ ಆ ದಿನಾಂಕದವರೆಗೆ ಲೆಕ್ಕಹಾಕಲಾಗಿದ್ದ ಬಡ್ಡಿಯು ರೂ.2,52,55,682/– ಆಗಿದ್ದು, ಅದು ನಿಗಮದ ಲೆಕ್ಕಪುಸ್ತಕಗಳಲ್ಲಿ ಪಾವತಿಸಲು ಬಾಕಿಯಿರುತ್ತದೆ. ಆ ವರ್ಷದ ಅಂತ್ಯದಲ್ಲಿದ್ದಂತೆ ಭಾರತ ಸರ್ಕಾರಕ್ಕೆ ಬಾಕಿ

ಇದ್ದಂತಹ ಮೊತ್ತದ ಬಗ್ಗೆ ಖಚಿತಪಡಿಸಿಕೊಂಡಿದ್ದರ ಬಗ್ಗೆ ಯಾವುದೇ ದಾಖಲೆಗಳನ್ನು ನಮಗೆ ಒದಗಿಸಲಿಲ್ಲ, ಇದರ ಅನುಪಸ್ಥಿತಿಯಲ್ಲಿ, ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಬಡ್ಡಿ ಮೊತ್ತದ ಅನುವನ್ನು ಮಾಡುವ ಅಗತ್ಯತೆಯ ಬಗ್ಗೆ ನಮ್ಮ ಅಭಿಪ್ರಾಯವನ್ನು ತಿಳಿಸಲು ಸಾಧ್ಯವಾಗುವುದಿಲ್ಲ. ಲೆಕ್ಕಪತ್ರಗಳ ಮೇಲೆ ಇದರ ಪ್ರಭಾವವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

14. ಲೆಕ್ಕಪತ್ರಗಳ ಟಿಪ್ಪಣಿ ಸಂಖ್ಯೆ 31 (ಸಿ) (2)ರಲ್ಲಿ ತಿಳಿಸಿರುವಂತೆ, ಪ್ರಸಕ್ತ ಸಾಲಿಗೆ ಸುವರ್ಣ ರಥದ (ದಿ ಗೋಲ್ಡನ್ ಚಾರಿಯಟ್) ಕಾರ್ಯಾಚರಣೆಗಳಿಗಾಗಿ ರೈಲ್ವೇ ಇಲಾಖೆಗೆ ಪಾವತಿಸಬೇಕಾದ ಸಾಗಾಣಿಕೆ ಶುಲ್ಕಗಳಿಗೆ (ಹಾಲೇಜ್ ಚಾರ್ಜ್) ಸಂಬಂಧಿಸಿದಂತೆ ನಿಗಮವು ಲೆಕ್ಕಹಾಕಿರುವ ಮೊತ್ತವನ್ನು ರೈಲ್ವೇ ಇಲಾಖೆಯು ಒಪ್ಪಿಕೊಂಡಿರುವುದಿಲ್ಲ ಹಾಗೂ ಅದು ಅದಕ್ಕೆ ಪ್ರತಿಯಾಗಿ ತಾನು ಲೆಕ್ಕಹಾಕಿರುವಂತೆ ಪಾವತಿಗಾಗಿ ಕೋರಿಕೆಯನ್ನು ಸಲ್ಲಿಸಿರುವುದು. ನಿಗಮವು ಈ ನಿಟ್ಟಿನಲ್ಲಿ ರೈಲ್ವೇ ಇಲಾಖೆಯೊಂದಿಗೆ ವ್ಯವಹರಿಸುತ್ತಿರುವುದು. ನಿಗಮವು ಈ ನಿಟ್ಟಿನಲ್ಲಿ ಅನುವು ಮಾಡಿರುವ ಮೊತ್ತವನ್ನು ರೈಲ್ವೇ ಇಲಾಖೆಯು ಒಪ್ಪಿಕೊಳ್ಳದಿದ್ದಲ್ಲಿ ಹಾಗೂ ರೈಲ್ವೇ ಇಲಾಖೆಯು ಕೋರಿರುವ ಮೊತ್ತವನ್ನು ಪಾವತಿಸಬೇಕಾದಲ್ಲಿ, ಪ್ರಸಕ್ತ ಸಾಲಿಗೆ ತೆರಿಗೆ ಪಾವತಿಗೆ ಮುಂಚಿನ ಲಾಭವು ರೂ.72,58,510/– ಆಗುತ್ತದೆ ಹಾಗೂ ಚಾಲ್ತಿ ಆಸ್ತಿಗಳು ರೂ.24,119,321/–ರಷ್ಟು ಕಡಿಮೆಯಾಗುತ್ತದೆ ಹಾಗೂ ಚಾಲ್ತಿ ಜವಾಬ್ದಾರಿಗಳು ರೂ.1,68,60,811/–ರಷ್ಟು ಕಡಿಮೆಯಾಗುತ್ತದೆ.

ನಮ್ಮ ಷರತ್ತುಬದ್ಧ ಅಭಿಪ್ರಾಯ

ಮೇಲೆ ನೀಡಲಾಗಿರುವಂತಹ ನಮ್ಮ ಟೀಕೆಟಿಪ್ಪಣಿಗಳ ಷರತ್ತಿಗೆ ಒಳಪಟ್ಟಂತೆ, ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮಗೆ ದೊರಕಿರುವ ಅತ್ಯುತ್ತಮ ಮಾಹಿತಿಯಂತೆ ಹಾಗೂ ನಮಗೆ ನೀಡಲಾಗಿರುವಂತಹ ವಿವರಣೆಗಳ ಅನುಸಾರ, ಮೇಲೆ ತಿಳಿಸಲಾಗಿರುವಂತಹ ಹಣಕಾಸು ತ:ಖ್ತೆಗಳು ಅಧಿನಿಯಮದ ಅನುವುಗಳ ಅಗತ್ಯತೆಗಳ ಪ್ರಕಾರ, 31 ಮಾರ್ಚ್ 2018ರಲ್ಲಿದ್ದಂತೆ ಕಂಪನಿಯ ವ್ಯವಹಾರಗಳಿಗೆ ಸಂಬಂಧಿಸಿದಂತ್ಗೆ ಹಾಗೂ ಅದೇ ದಿನಾಂಕದಂದು ಅಂತ್ಯಗೊಂಡ ಸಾಲಿಗೆ ಅದು ಗಳಿಸಿದ ಲಾಭ ಹಾಗೂ ಅದರ ಹಣಕಾಸಿನ ಹರಿವಿನ ಮೇಲೆ, ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಒಂದು ಸತ್ಯಾಸತ್ಯತೆಯಿಂದ ಹಾಗೂ ನ್ಯಾಯಸಮ್ಮತತೆಯಿಂದ ಕೂಡಿದ ಅಭಿಪ್ರಾಯವನ್ನು ನೀಡುತ್ತವೆ.

ಇತರೆ ವಿಷಯಗಳು

ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 41ಎಲ್‌ಜಿಬಿ 2014 ದಿನಾಂಕ 5–3–2018ರ ಅನುಸಾರ, ಬೆಂಗಳೂರಿನ ಚಳ್ಳಘಟ್ಟದಲ್ಲಿನ ಭೂಮಿಗಾಗಿ ಕರ್ನಾಟಕ ಸರ್ಕಾರದಿಂದ ನಿಗಮಕ್ಕೆ ಗುತ್ತಿಗೆ ಒಡಂಬಡಿಕೆಯನ್ನು ನವೀಕರಿಸಿಕೊಟ್ಟಿರುವುದಿಲ್ಲ. ಆದಾಗ್ಯೂ, ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ನಿಂದ ಮೇಲೆ ತಿಳಿಸಲಾದಂತಹ ಭೂಮಿಗಾಗಿ ಪಡೆಯುತ್ತಿರುವ ಗುತ್ತಿಗೆ/ಪರವಾನಿಗೆ ಶುಲ್ಕದ ವರಮಾನವನ್ನು ಆ ಸಂಸ್ಥೆಯೊಂದಿಗಿನ ಒಡಂಬಡಿಕೆಯ ಅನುಸಾರ ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ನಿಂದ ಸ್ವೀಕೃತಗೊಳ್ಳುವ ಮೊತ್ತದ ಆಧಾರದ ಮೇರೆಗೆ ಪರಿಗಣಿಸಲಾಗುತ್ತಿದೆ.
ಈ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಅಭಿಪ್ರಾಯವು ಷರತ್ತುಬದ್ಧವಾಗಿರುವುದಿಲ್ಲ.

2. ***ಇತರೆ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ***

1 ಭಾರತ ಸರ್ಕಾರವು ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ (11)ರ ಷರತ್ತುಗಳಂತೆ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ಅಗತ್ಯತೆಯಂತೆ, ಮೇಲೆ ತಿಳಿಸಲಾದಂತಹ ಆದೇಶದ ಕಂಡಿಕೆಗಳು 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಲಾಗಿರುವ ವಿಷಯಗಳ ಮೇಲೆ ಒಂದು ತ:ಖ್ತೆಯನ್ನು ನಾವು ಅನುಬಂಧ–ಎ ಎಂಬುದಾಗಿ ಲಗತ್ತಿಸಿರುವೆವು.

2. ಅಧಿನಿಯಮದ ಪರಿಚ್ಛೇದ 143ರ ಉಪ–ಕಂಡಿಕೆ (5)ರ ಅಗತ್ಯತೆಯಂತೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನಿಗಮಕ್ಕೆ ನಿರ್ದಿಷ್ಟಪಡಿಸಿರುವಂತಹ ವಿಷಯಗಳ ಬಗ್ಗೆ ಅನುಬಂಧ–2ರಲ್ಲಿ ವರದಿಯನ್ನು ನೀಡಿರುವೆವು.

3. ಅಧಿನಿಯಮದ ಪರಿಚ್ಛೇದ 143ರ (3)ರ ಅಗತ್ಯತೆಯಂತೆ, ನಾವು ಈ ಕೆಳಗಿನಂತೆ ವರದಿ ಮಾಡುತ್ತಿರುವೆವು

ಎ) ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ನಮ್ಮ ಅತ್ಯುತ್ತಮ ಅರಿವಿಗೆ ಹಾಗೂ ನಂಬಿಕೆಯ ಪ್ರಕಾರ ಅಗತ್ಯವೆಂಬುದಾಗಿ ಪರಿಗಣಿಸಲಾಯಿತೋ ಅಂತಹ ಎಲ್ಲಾ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದುಕೊಂಡಿರುವೆವು.

ಬಿ) ನಮ್ಮ ಅಭಿಪ್ರಾಯದಲ್ಲಿ, ನಾವು ಪರಿಶೀಲಿಸಲಾದ ಲೆಕ್ಕ ಪುಸ್ತಕಗಳಿಂದ ಗಮನಿಸಲಾದಂತೆ ಕಂಪನಿಯು ನಿಯಮಗಳ ಪ್ರಕಾರ ಅಗತ್ಯವಿರುವ ಸಮರ್ಪಕ ಲೆಕ್ಕಪುಸ್ತಕಗಳನ್ನು ನಿರ್ವಹಿಸಲಾಗಿರುವುದು.

ಸಿ) ಈ ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿರುವ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ ಹಾಗೂ ಲಾಭ ಮತ್ತು ನಷ್ಟ ತ:ಖ್ತೆಗಳು ಹಾಗೂ ಹಣಕಾಸು/ನಗದು ಹರಿವಿನ ತ:ಖ್ತೆಗಳು ಲೆಕ್ಕ ಪುಸ್ತಕಗಳಿಗೆ ತಾಳೆ ಹೊಂದುತ್ತವೆ.

ಡಿ) **"ಷರತ್ತುಬದ್ಧ ಅಭಿಪ್ರಾಯಗಳಿಗೆ ಆಧಾರ"** ಕಂಡಿಕೆಯಲ್ಲಿ ತಿಳಿಸಿರುವ ವಿಷಯಗಳನ್ನು ಹೊರತುಪಡಿಸಿದಂತೆ, ಮೇಲೆ ತಿಳಿಸಲಾಗಿರುವಂತಹ ಪ್ರತ್ಯೇಕ ಹಣಕಾಸು ತ:ಖ್ತೆಗಳು ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 7ರ ಜೊತೆಯಲ್ಲಿ ಓದಲ್ಪಡುವ ಅಧಿನಿಯಮದ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಅನುಸಾರ ತಯಾರಿಸಲ್ಪಟ್ಟಿರುವವು.

ಇ) ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ನೀಡಿರುವಂತಹ ಅಧಿಸೂಚನೆ ಸಂಖ್ಯೆ ಜಿಎಸ್ಆರ್ 463 (ಇ) ದಿನಾಂಕ 5 ಜೂನ್ 2015ರ ಮೂಲಕ ನೀಡಲಾಗಿರುವಂತಹ ವಿನಾಯಿತಿಗಳ ಕಾರಣ ನಿರ್ದೇಶಕರುಗಳನ್ನು ಅನರ್ಹಗೊಳಿಸುವುದಕ್ಕೆ ಸಂಬಂಧಿಸಿದಂತೆ ಅಧಿನಿಯಮದ ಪರಿಚ್ಛೇದ 164 (2) ನಿಗಮಕ್ಕೆ ಅನ್ವಯಗೊಳ್ಳುವುದಿಲ್ಲ.

ಎಫ್) ಕಂಪನಿಯ ಹಣಕಾಸಿನ ವರದಿಗಳ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಸಮರ್ಪಕತೆಗೆ ಸಂಬಂಧಿಸಿದಂತೆ ಹಾಗೂ ಅಂತಹ ನಿಯಂತ್ರಣಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವಕ್ಕೆ ಸಂಬಂಧಿಸಿದಂತೆ, **'ಅನುಬಂಧ 3'ರ**ಲ್ಲಿ ನೀಡಲಾಗಿರುವ ನಮ್ಮ ಪ್ರತ್ಯೇಕ ವರದಿಯನ್ನು ಉಲ್ಲೇಖಿಸುವುದು.

ಜಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾದ ಇತರೆ ವಿಷಯಗಳಿಗೆ

ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮ್ಮ ಅರಿವಿಗೆ ಬಂಧಿರುವಂತೆ ಮತ್ತು ನಮಗೆ ನೀಡಲಾಗಿರುವ ವಿವರಣೆಗಳಂತೆ :

i) ನಿಗಮವು ಕಂಪನಿಯ ವಿರುದ್ಧ ಸಲ್ಲಿಸಲಾಗಿರುವಂತಹ ವಿವಿಧ ಪ್ರಕರಣಗಳನ್ನು ಒಳಗೊಂಡಂತೆ ಮೊತ್ತಗಳನ್ನು ಪರಿಮಾಣೀಕರಿಸಿರುವುದಿಲ್ಲ, ಅದರ ಅನುಪಸ್ಥಿತಿಯಲ್ಲಿ 31 ಮಾರ್ಚ್ 2018ರಲ್ಲಿದ್ದಂತೆ ತನ್ನ ಹಣಕಾಸು ತ:ಖ್ತೆಗಳಲ್ಲಿ ಅದರ ಹಣಕಾಸಿನ ಸ್ಥಿತಿಗತಿಗಳ ಮೇಲೆ ಬಾಕಿಯಿರುವಂತಹ ವಿವಾದಗಳ ಪ್ರಭಾವವನ್ನು ಸಂಪೂರ್ಣವಾಗಿ ಬಹಿರಂಗಪಡಿಸಿರುವುದೇ ಎಂಬುದರ ಬಗ್ಗೆ ನಾವು ಟೀಕೆಟಿಪ್ಪಣಿ ಮಾಡಲು ಸಾಧ್ಯವಾಗಲಿಲ್ಲ.

ii) ನಿಗಮವು, ಜನ್ಯ ಗುತ್ತಿಗೆಗಳೂ ಸೇರಿದಂತೆ ಯಾವುದೇ ನಿರೀಕ್ಷಿಸಬಹುದಾದಂತಹ ವಿಷಯಕ ನಷ್ಟಗಳನ್ನು ಒಳಗೊಂಡಿರುವಂತಹ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಮಾಡಿಕೊಂಡಿರುವುದಿಲ್ಲ.

iii) ಹೂಡಿಕೆದಾರರ ಶಿಕ್ಷಣ ಹಾಗೂ ಸಂರಕ್ಷಣಾ ನಿಧಿಗೆ ಕಂಪನಿಯಿಂದ ವರ್ಗಾಯಿಸುವ ಅಗತ್ಯತೆಯಿರುವ ಯಾವುದೇ ಮೊತ್ತಗಳೂ ಇರುವುದಿಲ್ಲ.

iv) ನವೆಂಬರ್ 8 2016ರಿಂದ ಡಿಸೆಂಬರ್ 30, 2016ರ ಅವಧಿಯಲ್ಲಿ ಹೊಂದಿದ್ದಂತಹ ನಿರ್ದಿಷ್ಟ ಬ್ಯಾಂಕು ನೋಟುಗಳ ಬಗ್ಗೆ ಬಹಿರಂಗಪಡಿಸುವಿಕೆಯು ಒಂದು ನಿರ್ದಿಷ್ಟ ಘಟನೆಗೆ ಸಂಬಂಧಿಸಿದ್ದುದರಿಂದ, ಅದು ಈ ವರದಿಯ ಅಡಿಯಲ್ಲಿನ ಅವಧಿಗೆ ಪ್ರಸ್ತುತವೆನಿಸುವುದಿಲ್ಲ.

ಪಿ.ವಿ. ಮೆನನ್ ಅಂಡ್ ಶೇಖರ್ ಅಸೋಸಿಯೇಟ್ಸ್‌ಗಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 002066ಎಸ್

ಸಹಿ/–
ಪಿ.ವಿ. ಮೆನನ್
(ಪಾಲುದಾರರು)
ಸದಸ್ಯತ್ವ ಸಂಖ್ಯೆ:018644

ಸ್ಥಳ : ಬೆಂಗಳೂರು
ದಿನಾಂಕ : 19 ಡಿಸೆಂಬರ್ 2018

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ "ಅನುಬಂಧ–1"

ನಮ್ಮ ಅದೇ ದಿನಾಂಕದ ವರದಿಯಲ್ಲಿ "ಇತರೆ ಕಾನೂನಾತ್ಮಕ ಮತ್ತು ನಿಯಂತ್ರಕ ಅಗತ್ಯತೆಗಳು" ಶೀರ್ಷಿಕೆಯ ಅಡಿಯಲ್ಲಿ ಕಂಡಿಕೆ 1ರಲ್ಲಿ ಉಲ್ಲೇಖಿಸಲಾಗಿರುವಂತೆ.

1 (ಎ) ನಿಗಮವು ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ ಪರಿಮಾಣಾತ್ಮಕ ವಿವರಗಳು ಹಾಗೂ ಅವುಗಳು ಇರುವಂತಹ ಸ್ಥಳವನ್ನು ತೋರಿಸಿದಂತೆ ಸಂಪೂರ್ಣ ವಿವರಗಳನ್ನು ತೋರಿಸಿದಂತೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಿರುವುದಿಲ್ಲ.

(ಬಿ) ವ್ಯವಸ್ಥಾಪನೆಯು/ಆಡಳಿತ ಮಂಡಳಿಯು ಪ್ರಧಾನ ಕಚೇರಿ ಹಾಗೂ ಸುವರ್ಣ ರಥದಲ್ಲಿರುವವುಗಳನ್ನು (ದಿ ಗೋಲ್ಡನ್ ಚಾರಿಯಟ್) ಹೊರತುಪಡಿಸಿದಂತೆ ವರ್ಷದ ಕೊನೆಯಲ್ಲಿ ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆಯನ್ನು ನಡೆಸಿರುವುದು. ಸ್ಥಿರಾಸ್ತಿಗಳ ರಿಜಿಸ್ಟರಿನ ಅನುಪಸ್ಥಿತಿಯಲ್ಲಿ, ಅವುಗಳನ್ನು ಲೆಕ್ಕಪತ್ರ ಪುಸ್ತಕಗಳಲ್ಲಿ ಸಮರ್ಪವಕವಾಗಿ ವ್ಯವಹರಿಸಲಾಗಿರುವುದೇ ಎಂಬುದನ್ನು ನಾವು ಖಚಿತಪಡಿಸಿಕೊಳ್ಳಲಾಗಲಿಲ್ಲ.

(ಸಿ) ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ಆಸ್ತಿ–ಜವಾಬ್ದಾರಿ ತ:ಖ್ತೆಯಲ್ಲಿ ಸ್ಥಿರಾಸ್ತಿಗಳ ಅಡಿಯಲ್ಲಿ ತೋರಿಸಲಾಗಿರುವಂತೆ ಕಂಪನಿಯು ರೂ.26,57,967/– ಮೌಲ್ಯದ 4 ಗುತ್ತಿಗೆ ಹಿಡುವಳಿ ಭೂಮಿಯನ್ನು ಹೊಂದಿರುವುದು, ಅವುಗಳಿಗಾಗಿ, ನಮಗೆ ನೀಡಲಾಗಿರುವಂತಹ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ ಸರ್ಕಾರಿ ಆದೇಶಗಳ ಕಾರಣದಿಂದಾಗಿ ಹಕ್ಕುಪತ್ರಗಳನ್ನು ಹೊಂದಿರುವುದು.

ಕಂಪನಿಯು ಸ್ವತ: ತಾನೇ ಹೋಟೆಲುಗಳ ಕಾರ್ಯಾಚರಣೆ ನಡೆಸುವ ಉದ್ದೇಶದಿಂದ ಅಥವಾ ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು ಆಧಾರದ ಮೇರೆಗೆ ಕಾರ್ಯಾಚರಣೆಗಾಗಿ ಮೂರನೇ ತಂಡಗಳಿಗೆ ಪರವಾನಿಗೆ ನೀಡುವ ಮೂಲಕ ಅವುಗಳ ಕಾರ್ಯಾಚರಣೆ ನಡೆಸುವ ಸಲುವಾಗಿ ವಿವಿಧ ಸ್ಥಳಗಳಲ್ಲಿ ಕಟ್ಟಡಗಳನ್ನು ನಿರ್ಮಿಸಿರುವುದು. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ಕಟ್ಟಡಗಳನ್ನು ನಿರ್ಮಿಸಿರುವ ಭೂಮಿಯನ್ನು ಸರ್ಕಾರಿ ಆದೇಶಗಳ ಮೂಲಕ ಕಂಪನಿಗೆ ವರ್ಗಾಯಿಸಲಾಗಿರುವುದು. ಆದಾಗ್ಯೂ, 'ಅನುಬಂಧ–2ಎ'ನಲ್ಲಿ ನೀಡಿರುವ ವಿವರಣೆಗಳಂತೆ, ಕೆಲವು ಪ್ರಕರಣಗಳಲ್ಲಿ, ಕಂಪನಿಯ ಹೆಸರಿನಲ್ಲಿ ವಾಸ್ತವಿಕವಾಗಿ ನೋಂದಣಿ ಮಾಡಿಸಿರುವುದಿಲ್ಲ.

2 (ಎ) ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ವ್ಯವಸ್ಥಾಪನೆಯು ದಾಸ್ತಾನುಗಳನ್ನು ವರ್ಷದ ಕೊನೆಯಲ್ಲಿ ಭೌತಿಕವಾಗಿ ಪರಿಶೀಲಿಸಿರುವುದು.

(ಬಿ) ನಿಯತಕಾಲಿಕ ಭೌತಿಕ ಪರಿಶೀಲನೆಗಾಗಿ ಕಾರ್ಯವಿಧಾನಗಳು ದಾಖಲೆಗಳಲ್ಲಿ ಅನುಪಸ್ಥಿತವಾಗಿರುವ ಸಂದರ್ಭದಲ್ಲಿ ಹಾಗೂ ನಿಗಮದ ವಿವಿಧ ಘಟಕಗಳಲ್ಲಿ ನಿಯತಕಾಲಿಕ ಭೌತಿಕ ಪರಿಶೀಲನೆಯನ್ನು ನಡೆಸಿದ್ದಕ್ಕೆ ಸಾಕ್ಷಾಧಾರಗಳ ಅನುಪಸ್ಥಿತಿಯಲ್ಲಿ, ವ್ಯವಸ್ಥಾಪನೆಯು ಸರಕುಸಾಮಗ್ರಿಗಳ ಭೌತಿಕ ಪರಿಶೀಲನೆಗಾಗಿ ಅನುಸರಿಸಿದ ಕಾರ್ಯವಿಧಾನವು ಕಂಪನಿಯ ಗಾತ್ರ ಹಾಗೂ ಅದರ ವ್ಯಾಪಾರ ವ್ಯವಹಾರದ ಸ್ವರೂಪಕ್ಕೆ ತಕ್ಕಂತೆ ನ್ಯಾಯಸಮ್ಮತವಾಗಿದ್ದಿತೆ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ.

(ಸಿ) ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ಭೌತಿಕ ಪರಿಶೀಲನೆಯಲ್ಲಿ ಯಾವುದೇ ವಿಷಯಕ ಲೋಪದೋಷಗಳು/ಕೊರತೆಗಳು ಇರಲಿಲ್ಲ, ಆದ್ದರಿಂದ

ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಲೋಪದೋಷಗಳು/ಕೊರತೆಗಳ ಹೊಂದಾಣಿಕೆಯ ಪ್ರಶ್ನೆಯು ಉದ್ಭವಿಸುವುದಿಲ್ಲ.

3. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ನಿಗಮವು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 189ರ ಅಡಿಯಲ್ಲಿ ನಿರ್ವಹಿಸಲಾಗಿರುವ ರಿಜಿಸ್ಟರಿನಲ್ಲಿ ವ್ಯಾಪಿಸುವಂತಹ ಕಂಪನಿಗಳು, ಸಂಸ್ಥೆಗಳು ಅಥವಾ ತಂಡಗಳಿಗೆ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ.
4. ಕಂಪನಿಯು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 185 ಮತ್ತು 186ರ ಅನುವುಗಳನ್ನು ಆಕರ್ಷಿಸುವಂತಹ ಯಾವುದೇ ಸಾಲಗಳು, ಹೂಡಿಕೆಗಳು, ಖಾತರಿಗಳು ಹಾಗೂ ಭದ್ರತೆಗಳನ್ನು ಒದಗಿಸಿರುವುದಿಲ್ಲ. ಆದ್ದರಿಂದ ಆದೇಶದ ಕಂಡಿಕೆ 3 (iii) ಕಂಪನಿಗೆ ಅನ್ವಯಿಸುವುದಿಲ್ಲ.
5. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ಅಧಿನಿಯಮದ ಪರಿಚ್ಛೇದಗಳು 73ರಿಂದ 76ರ ಅನುವುಗಳು ಹಾಗೂ ಅವುಗಳ ಅಡಿಯಲ್ಲಿ ರೂಪಿಸಲಾಗಿರುವಂತಹ ನಿಯಮಗಳನ್ನು ಅರ್ಥೈಸುವಂತಹ ರೀತಿಯಲ್ಲಿ ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನೂ ಸ್ವೀಕರಿಸಿರುವುದಿಲ್ಲ.
6. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ನಿಗಮವು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 148 (1)ರ ಅನುವುಗಳ ಪ್ರಕಾರ ವಾಸ್ತವಿಕ ವೆಚ್ಚ/ಮೌಲ್ಯ ದಾಖಲೆಗಳನ್ನು ನಿರ್ವಹಿಸುವ ಅಗತ್ಯತೆಯಿರುವುದಿಲ್ಲ.
7. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ ಹಾಗೂ ನಾವು ಪರಿಶೀಲಿಸಿದ ದಾಖಲೆಗಳ ಪ್ರಕಾರ, ಆದಾಯ ತೆರಿಗೆ, ಮಾರಾಟಗಳ ಮೇಲಿನ ತೆರಿಗೆ ಹಾಗೂ ಸರಕುಗಳು ಮತ್ತು ಸೇವೆಗಳ ಮೇಲಿನ ತೆರಿಗೆ ಮುಂತಾದ ಅವಿವಾದಿತ ಶಾಸನಬದ್ಧ ಬಾಕಿಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸುವಲ್ಲಿ ಕೆಲವು ಪ್ರಕರಣಗಳಲ್ಲಿ ವಿಳಂಬಗಳಾಗಿದ್ದವು. ಹಣಕಾಸು ಸಾಲಿನ ಕಡೆಯ ದಿನಾಂಕದಲ್ಲಿದ್ದಂತೆ, ಈ ಕೆಳಗಿನವುಗಳನ್ನು ಹೊರತುಪಡಿಸಿದಂತೆ, ಪಾವತಿಸಲು ನಿಗದಿತ ದಿನಾಂಕದಿಂದ ಆರು ತಿಂಗಳುಗಳಿಗೂ ಮೀರಿದ ಅವಧಿಗೆ ಬಾಕಿಯಿರುವಂತಹ ಅವಿವಾದಿತ ಶಾಸನಬದ್ಧ ಬಾಕಿಗಳು ಯಾವುದೂ ಇರಲಿಲ್ಲ.

ಬಾಕಿಗಳ ಸ್ವರೂಪ	ಮೊತ್ತ ರೂಪಾಯಿಗಳಲ್ಲಿ
ವೃತ್ತಿಗಳ ಮೇಲಿನ ತೆರಿಗೆ	7,240
ಆದಾಯ ತೆರಿಗೆ	19,91,374
ಕಾರ್ಮಿಕ ಕ್ಷೇಮಾಭಿವೃದ್ಧಿ ಸೆಸ್ಸು	30,78,234
ಭವಿಷ್ಯ ನಿಧಿ	1,02,719

ಬಿ) ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ವಿವಾದಗಳ ಕಾರಣ ಬಾಕಿಯಿರುವಂತಹ ಆದಾಯ ತೆರಿಗೆ ಬಾಕಿಗಳು ಅಥವಾ ಇತರೆ ತೆರಿಗೆಗಳು ಈ ಕೆಳಗಿನಂತಿದ್ದವು

ಇಲಾಖೆ/ಕಚೇರಿ	ಬಾಕಿಗಳ ಸ್ವರೂಪ	ಲಕ್ಷ ರೂಪಾಯಿಗಳಲ್ಲಿ	ಯಾವ ಪ್ರಾಧಿಕಾರದಲ್ಲಿ ವಿವಾದವು ಬಾಕಿಯಿರುವುದು
ಆದಾಯ ತೆರಿಗೆ ಇಲಾಖೆ	ಆದಾಯ ತೆರಿಗೆ ಕರನಿರ್ಧಾರಣಾ ಸಾಲು 2012–13	28.31	ಆದಾಯ ತೆರಿಗೆ ಮನವಿ ಪ್ರಾಧಿಕಾರ

8. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ನಿಗಮವು ಸರ್ಕಾರದಿಂದ ಪಡೆದುಕೊಂಡಿರುವಂತಹ ಈ ಕೆಳಗಿನ ಸಾಲಗಳನ್ನು ಹೊರತುಪಡಿಸಿದಂತೆ, ಹಣಕಾಸು ಸಂಸ್ಥೆಗಳಿಗೆ, ಬ್ಯಾಂಕುಗಳಿಗೆ, ಸರ್ಕಾರಕ್ಕೆ ಹಾಗೂ ಡಿಬೆಂಚರುಗಳನ್ನು ಹೊಂದಿರುವವರಿಗೆ ಸಾಲಗಳನ್ನು ಅಥವಾ ಋಣಗಳನ್ನು ಮರುಪಾವತಿಸುವಲ್ಲಿ ತಪ್ಪಿತಸ್ತಗೊಂಡಿರುವುದಿಲ್ಲ

ಸಾಲದಾತರು	ತಪ್ಪಿತಸ್ತಗೊಂಡಿರುವ ಮೊತ್ತ (ಲಕ್ಷ ರೂಪಾಯಿಗಳಲ್ಲಿ)	ತಪ್ಪಿತಸ್ತಗೊಂಡಿರುವ ಅವಧಿ
ಕರ್ನಾಟಕ ಸರ್ಕಾರದಿಂದ ಅಭಿವೃದ್ಧಿ ಸಾಲ	100	2006–07ರಿಂದ ಮುಂದಕ್ಕೆ
ಪ್ರವಾಸೋದ್ಯಮ ಇಲಾಖೆಯ ಹಣಕಾಸಿನಿಂದ ಸುವರ್ಣ ರಥಕ್ಕಾಗಿ (ದಿ ಗೋಲ್ಡನ್ ಚಾರಿಯಟ್) ಸಾಲ	200	2010–11ರಿಂದ ಮುಂದಕ್ಕೆ

9. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ಅವಧಿ ಸಾಲಗಳನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಳ್ಳಲಾಗಿದ್ದಿತೋ, ಅದೇ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿರುವುದು. ನಿಗಮವು ಸಾರ್ವಜನಿಕರಿಗೆ ಷೇರು ಅಥವಾ ಬಾಂಡುಗಳನ್ನು ನೀಡುವ ಮೂಲಕ (ಸಾಲ/ಋಣ ಸಾಧನ/ಪತ್ರಗಳನ್ನು ಒಳಗೊಂಡಂತೆ) ಯಾವುದೇ ಹಣಕಾಸನ್ನೂ ಸಂಗ್ರಹಿಸಿರುವುದಿಲ್ಲ.

10. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ, ಪ್ರಸಕ್ತ ಸಾಲಿನಲ್ಲಿ ಚಿಕ್ಕಬಳ್ಳಾಪುರದ ನಂದಿ ಬೆಟ್ಟಗಳಲ್ಲಿನ ಹೋಟೆಲು ಮಯೂರ ಪೈನ್ ಟಾಪ್‌ನಲ್ಲಿ ನಿಗಮದ ಓರ್ವ ಸಿಬ್ಬಂದಿಯಿಂದ ರೂ.62,864/– ರಷ್ಟು ಮೊತ್ತದ ವಂಚನೆಯು ಸಂಭವಿಸಿರುವುದಾಗಿ ವರದಿಯಾಗಿರುವುದು.

11. ಸಾಂಸ್ಥಿಕ ವ್ಯವಹಾರಗಳ ಮಂತ್ರಾಲಯವು ನೀಡಿರುವಂತಹ ಅಧಿಸೂಚನೆ ಸಂಖ್ಯೆ ಜಿಎಸ್‌ಆರ್ 463 (ಇ) ದಿನಾಂಕ 5 ಜೂನ್ 2015ರ ಮೂಲಕ ನೀಡಲಾಗಿರುವಂತಹ ವಿನಾಯಿತಿಗಳ ಕಾರಣ ವ್ಯವಸ್ಥಾಪನಾ ಅಧಿಕಾರಿಗಳ ಸಂಬಳ–ಸಂಭಾವನೆಗೆ ಸಂಬಂಧಿಸಿದಂತೆ ಅಧಿನಿಯಮದ ಷೆಡ್ಯೂಲುಗಿರ ಜೊತೆಯಲ್ಲಿ ಓದಲ್ಪಡುವಂತಹ ಪರಿಚ್ಛೇದ 197ರ ಅನುವುಗಳು ನಿಗಮಕ್ಕೆ ಅನ್ವಯಗೊಳ್ಳುವುದಿಲ್ಲ. ಅದರಂತೆಯೇ ಆದೇಶದ ಕಂಡಿಕೆ 3 (ಥು) ಅನ್ವಯಗೊಳ್ಳುವುದಿಲ್ಲ.

12. ನಿಗಮವು ಒಂದು ನಿಧಿ ಕಂಪನಿ ಆಗಿರುವುದಿಲ್ಲ. ಅದರಂತೆಯೇ, ಆದೇಶದ ಕಂಡಿಕೆ 3 (ಥು) ಅನ್ವಯಗೊಳ್ಳುವುದಿಲ್ಲ.

13. ಪಾವತಿಸಲ್ಪಟ್ಟಿರುವ ಷೇರು ಬಂಡವಾಳವು ರೂ.10 ಕೋಟಿಗೂ ಕಡಿಮೆ ಇರುವುದರಿಂದ ಪರಿಚ್ಛೇದ 177ರ ಅನುವುಗಳು ಕಂಪನಿಗೆ ಅನ್ವಯಗೊಳ್ಳುವುದಿಲ್ಲ. ನಮಗೆ ನೀಡಲಾಗಿರುವ ಮಾಹಿತಿಯಂತೆ

ಹಾಗೂ ನೀಡಲಾಗಿರುವ ವಿವರಣೆಗಳಂತೆ, ನಮ್ಮ ಅಭಿಪ್ರಾಯದಲ್ಲಿ, ನಿಗಮಕ್ಕೆ ಅನ್ವಯಗೊಳ್ಳುವಷ್ಟರಮಟ್ಟಿಗೆ ಪರಿಚ್ಛೇದ 188ರ ಅನುವುಗಳನ್ನು ಅನುಸರಿಸಲಾಗಿರುವುದು ಹಾಗೂ ಅಂತಹ ವ್ಯವಹಾರಗಳ ವಿವರಗಳನ್ನು ಅನ್ವಯಗೊಳ್ಳುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡದ ಅಗತ್ಯತೆಯಂತೆ ಪ್ರತ್ಯೇಕ ಹಣಕಾಸು ತ:ಖ್ತೆಗಳಲ್ಲಿ ತೋರಿಸಲಾಗಿರುವುದು.

14. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ ಹಾಗೂ ನಾವು ಮಾಡಲಾದ ನಿಗಮದ ದಾಖಲೆಗಳ ಪರಿಶೀಲನೆಯಂತೆ, ನಿಗಮವು ಪ್ರಸಕ್ತ ಸಾಲಿನಲ್ಲಿ ಸಂಪೂರ್ಣವಾಗಿ ಅಥವಾ ಭಾಗಶ: ಪರಿವರ್ತಿಸಬಹುದಾದಂತಹ ಡಿಬೆಂಚರುಗಳ ಯಾವುದೇ ಆಧ್ಯತೆಯ ಹಂಚಿಕೆ ಅಥವಾ ಖಾಸಗಿ ಹಂಚಿಕೆಯನ್ನು ಮಾಡಿರುವುದಿಲ್ಲ.

15. ನಮಗೆ ನೀಡಲಾಗಿರುವ ಮಾಹಿತಿಯಂತೆ ಹಾಗೂ ನೀಡಲಾಗಿರುವ ವಿವರಣೆಗಳಂತೆ ಹಾಗೂ ನಾವು ಮಾಡಲಾದ ನಿಗಮದ ದಾಖಲೆಗಳ ಪರಿಶೀಲನೆಯಂತೆ, ನಿಗಮವು ನಿರ್ದೇಶಕರುಗಳ ಜೊತೆಯಲ್ಲಿ ಅಥವಾ ಅವರುಗಳಿಗೆ ಸಂಬಂಧಿತ ವ್ಯಕ್ತಿಗಳ ಜೊತೆಯಲ್ಲಿ ಯಾವುದೇ ನಗದುರಹಿತ ವ್ಯವಹಾರಗಳ ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ.

16. ನಿಗಮವು ಎನ್‌ಬಿಎಫ್‌ಸಿ ಆಗಿರುವುದಿಲ್ಲ ಮತ್ತು ಆದ್ದರಿಂದ ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ 1934ರ ಪರಿಚ್ಛೇದ 45–1ಎ ಅಡಿಯಲ್ಲಿ ನೋಂದಣಿ ಮಾಡಿಸುವ ಅಗತ್ಯತೆಯಿರುವುದಿಲ್ಲ.

ಪಿ.ವಿ. ಮೆನನ್ ಅಂಡ್ ಶೇಖರ್ ಅಸೋಸಿಯೇಟ್ಸ್‌ಗಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 002066ಎಸ್

ಪಿ.ವಿ. ಮೆನನ್
(ಪಾಲುದಾರರು)
ಸದಸ್ಯತ್ವ ಸಂಖ್ಯೆ:018644

ಸ್ಥಳ : ಬೆಂಗಳೂರು
ದಿನಾಂಕ : 19 ಡಿಸೆಂಬರ್ 2018

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ 2

"ಇತರೆ ಕಾನೂನಾತ್ಮಕ ಹಾಗೂ ನಿಯಂತ್ರಕ ಅಗತ್ಯತೆಗಳು" ಶೀರ್ಷಿಕೆಯ ಅಡಿಯಲ್ಲಿನ ಕಂಡಿಕೆ 2ರಲ್ಲಿ ಉಲ್ಲೇಖಿಸಲಾಗಿರುವಂತಹ ಅನುಬಂಧ –2

ಕ್ರಮ ಸಂಖ್ಯೆ	ನಿರ್ದೇಶನಗಳು	ಕೈಗೊಳ್ಳಲಾಗಿರುವ ಕ್ರಮ	ಹಣಕಾಸು ತ:ಖ್ತೆಗಳ ಮೇಲೆ ಭೀರಿರುವ ಪರಿಣಾಮ
1	ಕಂಪನಿಯು ನಿರುಪಾದಿಕ ಹಕ್ಕಿನ ಹಿಡುವಳಿ ಮತ್ತು ಗುತ್ತಿಗೆ ಹಿಡುವಳಿಗಳಿಗಾಗಿ ಸುಸ್ಪಷ್ಟವಾದಂತಹ ಹಕ್ಕು ಪತ್ರಗಳನ್ನು/ಗುತ್ತಿಗೆ ಕರಾರುಗಳನ್ನು ಹೊಂದಿರುವುದೆ. ಇಲ್ಲವಾದಲ್ಲಿ ಯಾವ ಕ್ಷೇತ್ರ/ಪ್ರದೇಶದಲ್ಲಿ ಸುಸ್ಪಷ್ಟವಾದಂತಹ ಹಕ್ಕು ಪತ್ರಗಳು/ಗುತ್ತಿಗೆ ಕರಾರು ಪತ್ರಗಳು ಇಲ್ಲ ಎಂಬುದನ್ನು ತಿಳಿಸುವುದು.	1)ಗುತ್ತಿಗೆ ಹಿಡುವಳಿ ಭೂಮಿ – ಸ್ಥಿರಾಸ್ತಿಗಳ ಅಡಿಯಲ್ಲಿ ಸೇರಿಸಲಾಗಿರುವುದು 2)ಸ್ವಂತ ಆಧಾರದ ಮೇರೆಗೆ ಅಥವಾ ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು (ಆರ್ಒಎಂಟಿ) ಆಧಾರದ ಮೇರೆಗೆ ಹೋಟೆಲುಗಳ ನಿರ್ಮಾಣ, ಇತ್ಯಾದಿಗಳಿಗಾಗಿ ಭೂಮಿ. ವಿವರಗಳು ಅನುಬಂಧ – 2ಎ ನಲ್ಲಿ.	ರೂ.26,57,967 –– ಯಾವುದೂ ಇರುವುದಿಲ್ಲ––
2	ಋಣಗಳು/ಸಾಲಗಳು, ಬಡ್ಡಿ ಇತ್ಯಾದಿಗಳನ್ನು ಮನ್ನಾ ಮಾಡಿರುವ/ದಾಖಲೆಗಳಿಂದ ತೆಗೆದುಹಾಕಿರುವ ಯಾವುದಾದರೂ ಪ್ರಕರಣಗಳು ಇದ್ದಲ್ಲಿ, ಅವುಗಳ ಬಗ್ಗೆ ವರದಿ ಸಲ್ಲಿಸಿ, ಅಂತಹ ಪ್ರಕರಣಗಳು ಇದ್ದಲ್ಲಿ, ಅವುಗಳಿಗೆ ಕಾರಣ ಹಾಗೂ ಅವುಗಳಲ್ಲಿ ಒಳಗೊಂಡಿರುವ ಮೊತ್ತವನ್ನು ತಿಳಿಸುವುದು.	ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ ಮನ್ನಾ ಮಾಡಿರುವ/ದಾಖಲೆಗಳಿಂದ ತೆಗೆದುಹಾಕಿರುವ ಯಾವುದೇ ಪ್ರಕರಣಗಳು ಇರುವುದಿಲ್ಲ.	–– ಯಾವುದೂ ಇರುವುದಿಲ್ಲ––
3	ಮೂರನೇ ತಂಡಗಳ ಜೊತೆ ಇರುವ ಸರಕು ದಾಸ್ತಾನುಗಳಿಗೆ ಹಾಗೂ ಸರ್ಕಾರದಿಂದ ಅಥವಾ ಇತರೆ ಪ್ರಾಧಿಕಾರಗಳಿಂದ ಉಡುಗೊರೆಯಾಗಿ ಸ್ವೀಕರಿಸಲಾದ ಆಸ್ತಿಗಳಿಗೆ ಸಮರ್ಪಕ ದಾಖಲೆಗಳನ್ನು ನಿರ್ವಹಿಸಲಾಗಿದೆಯೆ.	ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ ಮೂರನೇ ತಂಡಗಳೊಂದಿಗೆ ಯಾವುದೇ ಸರಕುಸಾಮಗ್ರಿಗಳನ್ನು ಬಿಟ್ಟಿರುವುದಿಲ್ಲ. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ ಪ್ರಸಕ್ತ ಸಾಲಿನಲ್ಲಿ ಸರ್ಕಾರ ಅಥಾವಾ ಇತರೆ ಪ್ರಾಧಿಕಾರಗಳಿಂದ ಯಾವುದೇ ಆಸ್ತಿಗಳನ್ನು ಉಡುಗೊರೆಯಾಗಿ ಸ್ವೀಕರಿಸಿರುವುದಿಲ್ಲ.	–– ಯಾವುದೂ ಇರುವುದಿಲ್ಲ––

ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು :

ಎ	ಅನ್ವಯಗೊಳ್ಳುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳ ಪ್ರಕಾರ ಸಲ್ಲಿಸಲಾಗಿರುವ ಹಣ ಬಳಕೆ ಪ್ರಮಾಣ ಪತ್ರಗಳ ಆಧಾರದ ಮೇರೆಗೆ ಪ್ರವಾಸೋದ್ಯಮ ಮೂಲಭೂತಸೌಕರ್ಯಗಳಿಗಾಗಿ ಸ್ವೀಕರಿಸಲಾದ ಅನುದಾನಗಳನ್ನು ಗುರಿಯಾಗಿಸಿಕೊಳ್ಳಲಾಗಿದ್ದ ಉದ್ದೇಶಗಳಿಗಾಗಿ ಬಳಸಿಕೊಳ್ಳಲ್ಪಟ್ಟಿರುವುದೆ ಹಾಗೂ ಅವುಗಳನ್ನು ಸಮರ್ಪಕವಾಗಿ ಲೆಕ್ಕ ಇಡಲಾಗಿರುವುದೆ.	ಅನುದಾನ ಬಳಕೆ ಪ್ರಮಾಣಪತ್ರಗಳ ಅನುಪಸ್ಥಿತಿಯಲ್ಲಿ ಹಾಗೂ ಎಲ್ಲಾ ಅನುದಾನಗಳನ್ನು ಒಂದು ಖಾತೆಯಲ್ಲಿ ಒಟ್ಟಾಗಿ ಸೇರಿಸಿಟ್ಟಿದ್ದರ ಕಾರಣ, ಅನುದಾನ ಬಳಕೆಯ ಬಗ್ಗೆ ನಾವು ಯಾವುದೇ ಟೀಕೆಟಿಪ್ಪಣಿಗಳನ್ನು ಮಾಡಲು ಸಾಧ್ಯವಾಗಲಿಲ್ಲ. ಲೆಕ್ಕವನ್ನಿಡುವಿಕೆ ಹಾಗೂ ಲೆಕ್ಕವನ್ನಿಡುವಿಕೆಗೆ ಸಂಬಂಧಿತ ಮಾನದಂಡಗಳ ಅನುಸರಣೆಯ ಬಗ್ಗೆ ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿನ ಷರತ್ತುಬದ್ಧ ಅಭಿಪ್ರಾಯವನ್ನು ಇಲ್ಲಿ ಪುನರ್–ಉಚ್ಚರಿಸುತ್ತಿರುವೆವು : "ನಿಗಮವು ಕೇಂದ್ರ/ರಾಜ್ಯ ಸರ್ಕಾರದಿಂದ ಸ್ವೀಕರಿಸಿದ ಎಲ್ಲಾ ಅನುದಾನ ಮೊತ್ತಗಳನ್ನು ಒಂದು ಸಾಮಾನ್ಯ ಖಾತೆಯಲ್ಲಿ ಒಟ್ಟಾಗಿ ಸೇರಿಸಿಡಲಾಗುತ್ತಿರುವುದು ಹಾಗೂ ಆ ಖಾತೆಯಿಂದ ವೆಚ್ಚಗಳನ್ನು ಮಾಡಲಾಗುತ್ತಿರುವುದು, ಅದರಿಂದಾಗಿ ಬಾಬುವಾರು ಬಳಕೆಯ ಮಾಹಿತಿಯು ಲಭ್ಯವಾಗುವುದಿಲ್ಲ. ಈ ರೀತಿಯಾಗಿ ನಿಗಮವು ಲೆಕ್ಕವನಿಡುವಿಕೆಗೆ ಸಂಬಂಧಿತ ಮಾನದಂಡ – 12ರಲ್ಲಿನ (ಸರ್ಕಾರಿ ಅನುದಾನಗಳಿಗೆ ಸಂಬಂಧಿಸಿದಂತೆ ಲೆಕ್ಕವನ್ನಿಡುವಿಕೆ ಹಾಗೂ ಬಹಿರಂಗಪಡಿಸುವಿಕೆ) ಅಗತ್ಯತೆಗಳನ್ನು ಅನುಸರಿಸಿರುವುದಿಲ್ಲ)	ಖಚಿತಪಡಿಸಿಕೊಳ್ಳಲು ಸಾಧ್ಯವಿರುವುದಿಲ್ಲ.
(ಬಿ)	ಸೇವೆಗಳನ್ನು ಹೊರಗುತ್ತಿಗೆಗೆ ನೀಡುವಿಕೆ, ಪ್ರವಾಸೋದ್ಯಮ ಮೂಲಸೌಕರ್ಯಗಳನ್ನು ಗುತ್ತಿಗೆಗೆ ನೀಡುವಿಕೆಗಳನ್ನು ಸರ್ಕಾರವು ನೀಡಿರುವ ಕಾರ್ಯನೀತಿ/ಮಾರ್ಗಸೂಚಿಗಳ ಅನುಸಾರ ಮಾಡಲಾಗಿರುವುದೆ ಹಾಗೂ ನಿಗಮವು ಗುತ್ತಿಗೆ ಬದ್ಧತೆಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಒಂದು ಪರಿಣಾಮಕಾರಿತ್ವದಿಂದ ಕೂಡಿದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಹೊಂದಿರುವುದೆ.	ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ಹೊರಗುತ್ತಿಗೆಗೆ ನೀಡುವಿಕೆಗೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರವು ಇತ್ತೀಚೆಗೆ ನೀಡಿರುವ ಕಾರ್ಯನೀತಿಯೆಂದರೆ 2003ರಲ್ಲಿ ನೀಡಿರುವುದು ಹಾಗೂ ನಿಗಮವು ಗುತ್ತಿಗೆ ಬದ್ಧತೆಗಳನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ಒಂದು ವ್ಯವಸ್ಥೆಯನ್ನು ಹೊಂದಿರುವುದು.	––ಯಾವುದೂ ಇರುವುದಿಲ್ಲ––

(ಸಿ)	ನಿಗಮವು ಪ್ರವಾಸಿಗರು ನೆಲೆಸಿರುವಿಕೆ, ಉತ್ಪನ್ನಗಳು, ಪ್ರಕ್ರಿಯೆಗಳು ಹಾಗೂ ಸೇವೆಗಳನ್ನು ಒಳಗೊಂಡಂತೆ ಪ್ರಮುಖ ಕಾರ್ಯಾಚರಣೆಗಳು/ಕೆಲಸಗಳ ವೆಚ್ಚ/ಮೌಲ್ಯಗಳನ್ನು ನಿಯತವಾಗಿ ಲೆಕ್ಕಹಾಕುತ್ತಿರುವುದೆ? ಇಲ್ಲವಾದಲ್ಲಿ ವಿಫಲತೆಗಳನ್ನು ವಿವರಿಸಿ.	ನಿಗಮವು ಪ್ರವಾಸಿಗರು ನೆಲೆಸಿರುವಿಕೆ, ಉತ್ಪನ್ನಗಳು, ಪ್ರಕ್ರಿಯೆಗಳು ಹಾಗೂ ಸೇವೆಗಳನ್ನು ಒಳಗೊಂಡಂತೆ ಪ್ರಮುಖ ಕಾರ್ಯಾಚರಣೆಗಳು/ಕೆಲಸಗಳ ವೆಚ್ಚ/ಮೌಲ್ಯಗಳನ್ನು ನಿಯತವಾಗಿ ಲೆಕ್ಕಹಾಕುತ್ತಿರುವುದಿಲ್ಲ. ನಿಗಮವು, ಎಲ್ಲೆಲ್ಲಿ ಲಾಭದ ನಷ್ಟವು ಸಂಭವಿಸುತ್ತಿರುವುದೋ ಅಂತಹ ಕಡೆ ಪರಿಹಾರಕ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ನಿಖರವಾದಂತಹ ವೆಚ್ಚ/ಮೌಲ್ಯವನ್ನು ಲೆಕ್ಕಹಾಕುವ ಹಾಗೂ ವ್ಯತ್ಯಯಗಳು ಯಾವುದಾದರೂ ಇದ್ದಲ್ಲಿ ಅವುಗಳ ಬಗ್ಗೆ ವಿಶ್ಲೇಷಿಸುವ ಸಲುವಾಗಿ ನಿಖರವಾದಂತಹ ವೆಚ್ಚ/ಮೌಲ್ಯಗಳನ್ನು ಲೆಕ್ಕಹಾಕುವ ವ್ಯವಸ್ಥೆಯನ್ನು ಹೊಂದಿರುವುದಿಲ್ಲ.	--ಯಾವುದೂ ಇರುವುದಿಲ್ಲ--

(ಡಿ)	ರಿಯಾಯಿತಿಗಳನ್ನು ನೀಡುವುದಕ್ಕೆ ಇರುವಂತಹ ಮಾನದಂಡಗಳು ಯಾವುವು ಹಾಗೂ ವೆಚ್ಚ/ಮೌಲ್ಯಗಳ ವಸೂಲಾತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವೆಚ್ಚ/ಮೌಲ್ಯ ಪ್ರಯೋಜನಗಳ ವಿಶ್ಲೇಷಣೆಯನ್ನು ಮಾಡಲಾಗಿರುವುದೆ. ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಲಾಗಿರುವ ಪ್ರಕರಣಗಳಲ್ಲಿ , ಅಂತಹ ಕ್ಷೇತ್ರಗಳನ್ನು ಗುರುತಿಸುವುದು ಹಾಗೂ ಆ ರೀತಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಮಾಡಲಾದ ವಸೂಲಾತಿಯ ಕಾರಣ ಭರಿಸಲಾದಂತಹ ನಷ್ಟದ ಬಗ್ಗೆ ಟೀಕೆಟಿಪ್ಪಣಿ ಮಾಡುವುದು.	ಒಂದು ಪರಿಪಾಠದಂತೆ, ಶೇಕಡಾ 20ರವರೆಗೆ ರಿಯಾಯಿತಿಯನ್ನು ನೀಡಲು ಎಲ್ಲಾ ಘಟಕಗಳಿಗೂ ಅನುಮತಿಯನ್ನು ನೀಡಲಾಗಿರುವುದು. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ರಿಯಾಯಿತಿಗಳನ್ನು ನೀಡುವ ಸಲುವಾಗಿ ಯಾವುದೇ ಮಾನದಂಡವನ್ನೂ ನಿಗದಿಪಡಿಸಿರುವುದಿಲ್ಲ. ವೆಚ್ಚ/ಮೌಲ್ಯವನ್ನು ಲೆಕ್ಕಹಾಕುವುದಕ್ಕೆ ಸಂಬಂಧಿತ ಮಾಹಿತಿಯ ಅನುಪಸ್ಥಿತಿಯಲ್ಲಿ , ವೆಚ್ಚ/ಮೌಲ್ಯ ಪ್ರಯೋಜನಗಳ ವಿಶ್ಲೇಷಣೆಯನ್ನು ಮಾಡಲು ನಿಗಮಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಕಡಿಮೆ ಪ್ರಮಾಣದಲ್ಲಿ ಮಾಡಲಾಗಿರುವಂತಹ ವಸೂಲಾತಿಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಮೊತ್ತವನ್ನು ಪರಿಮಾಣೀಕರಿಸುವುದರ ಅನುಪಸ್ಥಿತಿಯಲ್ಲಿ, ಈ ನಿಟ್ಟಿನಲ್ಲಿ ಭರಿಸಿರಬಹುದಾದ ನಷ್ಟದ ಬಗ್ಗೆ ಟೀಕೆಟಿಪ್ಪಣಿ ಮಾಡಲು ಸಾಧ್ಯವಾಗುವುದಿಲ್ಲ.	--ಯಾವುದೂ ಇರುವುದಿಲ್ಲ--

(ಇ)	ಲೆಕ್ಕಪರಿಶೋಧನೆಗೆ ಒಳಪಟ್ಟ ಸಂಸ್ಥೆಯು ತನ್ನ ಕಾರ್ಯಾಚರಣೆಗಳನ್ನು ಅದರ ಒಂದು ಭಾಗವನ್ನು ಗಣಕೀಕರಣಗೊಳಿಸಿದ್ದಲ್ಲಿ ನಿಗಮದ ಮಾಹಿತಿಯು ಎಷ್ಟರಮಟ್ಟಿಗೆ ವಿದ್ಯುನ್ಮಾನ ರೂಪದಲ್ಲಿರುವುದು ಹಾಗೂ ಲೆಕ್ಕವನ್ನಿಡುವಿಕೆ, ಮಾರಾಟಗಳಿಗೆ ಸಂಬಂಧಿತ ಸಿಬ್ಬಂದಿಯ ಮಾಹಿತಿ, ವೇತನ ಪಟ್ಟಿ, ಸರಕುಸಾಮಗ್ರಿಗಳ ದಾಸ್ತಾನು, ಇತ್ಯಾದಿ ಕ್ಷೇತ್ರಗಳ ಪೈಕಿ ಯಾವ ಕ್ಷೇತ್ರವನ್ನು ಗಣಕೀಕರಣಗೊಳಿಸಲಾಗಿದೆ ಹಾಗೂ ನಿಗಮವು ಮಾಹಿತಿ/ತಂತ್ರಾಂಶ ಅನ್ವಯ/ಯಂತ್ರಾಂಶಗಳಿಗಾಗಿ ಸಮರ್ಪಕ ಭದ್ರತಾ ಕಾರ್ಯನೀತಿಯನ್ನು ರೂಪಿಸಿರುವುದೆ ಎಂಬುದನ್ನು ತಿಳಿಸುವುದು.	ನಿಗಮವು, ಲೆಕ್ಕವನ್ನಿಡುವುದಕ್ಕಾಗಿ ಟ್ಯಾಲಿ ತಂತ್ರಾಂಶ ಅನ್ವಯವನ್ನು, ವೇತನ ಪಟ್ಟಿಗಾಗಿ, ಸಿದ್ಧ (ಟೈಲರ್ ಮೇಡ್) ತಂತ್ರಾಂಶ ಅನ್ವಯವನ್ನು ಹಾಗೂ ಮಾರಾಟಗಳ/ಸೇವೆಗಳ ಕಾಯ್ದಿರಿಸುವಿಕೆಗಳಿಗಾಗಿ ಆನ್‌ಲೈನ್ ತಂತ್ರಾಂಶ ಅನ್ವಯವನ್ನು ಹೊಂದಿರುತ್ತದೆ. ಎಲ್ಲಾ ತಂತ್ರಾಂಶ ಅನ್ವಯಗಳ ಪ್ಯಾಕೇಜುಗಳು ಪ್ರತ್ಯೇಕವಾಗಿದ್ದು ಅವುಗಳನ್ನು ಒಂದಕ್ಕೊಂದು ಸಂಪರ್ಕಗೊಳಿಸುವಿಕೆ/ಅನುಕಲಿತಗೊಳಿಸುವಿಕೆಯನ್ನು ಕಾರ್ಯಗತಗೊಳಿಸಿರುವುದಿಲ್ಲ. ನಮಗೆ ಒದಗಿಸಲಾದ ಮಾಹಿತಿಯಂತೆ ಹಾಗೂ ನೀಡಲಾದ ವಿವರಣೆಗಳಂತೆ, ನಿಗಮವು ಕೇಂದ್ರೀಕೃತ ಸರ್ವರನ್ನು ಪ್ರಧಾನ ಕಚೇರಿಯಲ್ಲಿ ಹೊಂದಿರುವುದು, ಸರ್ವರಿನಲ್ಲಿನ ಎಲ್ಲಾ ಘಟಕಗಳಿಗಾಗಿ ಬ್ಯಾಕ್–ಅಪ್ ಅನ್ನು ಪ್ರತಿದಿನವೂ ತೆಗೆದುಕೊಳ್ಳಲಾಗುವುದು ಹಾಗೂ ಬಾಹ್ಯ ಹಾರ್ಡ್‌ಡಿಸ್ಕಿನಲ್ಲಿ ಮಾಸಿಕ ಆಧಾರದ ಮೇರೆಗೆ ಸಂಗ್ರಹಿಸಿಡಲಾಗುವುದು.	––ಯಾವುದೂ ಇರುವುದಿಲ್ಲ––

ಪಿ.ವಿ. ಮೆನನ್ ಅಂಡ್ ಶೇಖರ್ ಅಸೋಸಿಯೇಟ್ಸ್‌ಗಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 002066ಎಸ್

ಸಹಿ/–
ಪಿ.ವಿ. ಮೆನನ್
(ಪಾಲುದಾರರು)
ಸದಸ್ಯತ್ವ ಸಂಖ್ಯೆ:018644

ಸ್ಥಳ : ಬೆಂಗಳೂರು
ದಿನಾಂಕ : 19 ಡಿಸೆಂಬರ್ 2018

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ –3

ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 143ರ ಉಪ–ಪರಿಚ್ಛೇದ 3ರ ಷರತ್ತು (i) ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ 31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ವರದಿಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು, ಅದೇ ದಿನಾಂಕಕ್ಕೆ ಅಂತ್ಯಗೊಂಡ ಸಾಲಿಗೆ ನಿಗಮದ ಪ್ರತ್ಯೇಕ ಹಣಕಾಸು ತ:ಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧನೆ ಮಾಡಿರುವೆವು.

ಆಂತರಿಕ ಹಣಕಾಸು ನಿಯಂತ್ರಣಗಳಿಗಾಗಿ ಆಡಳಿತ ಮಂಡಳಿಯ ಜವಾಬ್ದಾರಿ

ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ನಿಗಮದಿಂದ ಸ್ಥಾಪಿಸಲಾಗಿರುವ ಹಣಕಾಸು ವರದಿಯ ಮಾನದಂಡದ ಮೇಲೆ ಆಂತರಿಕ ನಿಯಂತ್ರಣವನ್ನು ಆಧರಿಸಿದಂತೆ ಆಂತರಿಕ ನಿಯಂತ್ರಣವನ್ನು ಸ್ಥಾಪಿಸುವುದು ಮತ್ತು ನಿರ್ವಹಿಸಿಕೊಂಡು ಹೋಗುವುದು ನಿಗಮದ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. ಈ ಜವಾಬ್ದಾರಿಗಳು, ನಿಗಮದ ಕಾರ್ಯನೀತಿಗಳಿಗೆ ಬದ್ಧತೆಯಿಂದ ಕೂಡಿರುವುದನ್ನೂ ಒಳಗೊಂಡಂತೆ ತನ್ನ ವ್ಯಾಪಾರವ್ಯವಹಾರವನ್ನು ನಿಯಮಗಳ ಅನುಸಾರ ಮತ್ತು ದಕ್ಷತೆಯಿಂದ ನಡೆಸುವುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಪರಿಣಾಮಕಾರಿತ್ವದಿಂದ ಕಾರ್ಯಚರಣೆಗೊಳ್ಳುತ್ತಿದ್ದ ಸಮರ್ಪಕವಾದಂತಹ ಆಂತರಿಕ ಹಣಕಾಸು ನಿಯಂತ್ರಣದ ವಿನ್ಯಾಸ, ಕಾರ್ಯಗತಗೊಳಿಸುವಿಕೆ ಮತ್ತು ನಿರ್ವಹಣೆ, ತನ್ನ ಆಸ್ತಿಗಳನ್ನು ಸಂರಕ್ಷಿಸುವುದು, ವಂಚನೆಗಳು ಮತ್ತು ತಪ್ಪುಗಳು ಸಂಭವಿಸುವುದನ್ನು ತಡೆಯುವುದು ಮತ್ತು ಅಂತಹ ಪ್ರಕರಣಗಳನ್ನು ಪತ್ತೆಹಚ್ಚುವುದು, ಲೆಕ್ಕವನ್ನಿಡುವಿಕೆಯ ದಾಖಲೆಗಳ ಯಥಾರ್ಥತೆ ಮತ್ತು ಪರಿಪೂರ್ಣತೆ ಹಾಗೂ ಕಂಪನಿಗಳ ಅಧಿನಿಯಮ ಕಾಯ್ದೆ 2013ರ ಅಡಿಯಲ್ಲಿ ಅಗತ್ಯತೆಯಿರುವಂತೆ ವಿಶ್ವಸನೀಯತೆಯಿಂದ ಕೂಡಿದ ಹಣಕಾಸಿಗೆ ಸಂಬಂಧಿತ ಮಾಹಿತಿಯನ್ನು ಸಮಯೋಚಿತವಾಗಿ ತಯಾರಿಸುವುದು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಲೆಕ್ಕಪರಿಶೋಧಕರ ಜವಾಬ್ದಾರಿ

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇರೆಗೆ ಈ ಹಣಕಾಸು ತ:ಖ್ತೆಗಳ ಮೇಲೆ ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿದೆ. ಅಧಿನಿಯಮದ ಅನುವುಗಳು, ಲೆಕ್ಕವನ್ನಿಡುವಿಕೆಯ ಹಾಗೂ ಲೆಕ್ಕಪರಿಶೋಧನೆಯ ಮಾನದಂಡಗಳು ಹಾಗೂ ಅಧಿನಿಯಮ ಹಾಗೂ ಅದರ ಅಡಿಯಲ್ಲಿ ರೂಪಿಸಲಾಗಿರುವ ನಿಯಮಗಳ ಅನುವುಗಳ ಅನುಸಾರ ಲೆಕ್ಕಪರಿಶೋಧನಾ ವರದಿಯಲ್ಲಿ ಸೇರಿಸಲು ಅಗತ್ಯವಿರುವ ವಿಷಯಗಳನ್ನು ನಾವು ಗಣನೆಗೆ ತೆಗೆದುಕೊಂಡಿರುವೆವು. ಕಂಪನಿಗಳ ಅಧಿನಿಯಮ ಕಾಯ್ದೆ 2013ರ ಪರಿಚ್ಛೇದ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ ಎಂಬುದಾಗಿ ಭಾವಿಸಲಾಗಿರುವ ಹಾಗೂ ಆಂತರಿಕ ಹಣಕಾಸು ನಿಯಂತ್ರಣಗಳಿಗೆ ಅನ್ವಯಗೊಳ್ಳುವ ಹಾಗೂ ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಲೆಕ್ಕಪರಿಶೋಧನಾ ಮಾನದಂಡಗಳ ಅನುಸಾರ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಗೊಳ್ಳುವಷ್ಟರ ಮಟ್ಟಿಗೆ, ನಾವು ನಮ್ಮ ಲೆಕ್ಕಪರಿಶೋಧನೆಯನ್ನು ನಡೆಸಿರುವೆವು. ನೈತಿಕತೆಯ

ಅಗತ್ಯತೆಗಳನ್ನು ಅನುಸರಿಸುವುದನ್ನು ಹಾಗೂ ಹಣಕಾಸು ತ:ಖ್ತೆಗಳು ವಿಷಯಕ ತಪ್ಪು ಹೇಳಿಕೆಗಳಿಂದ ಮುಕ್ತವಾಗಿವೆಯೇ ಎಂಬುದರ ಬಗ್ಗೆ ನ್ಯಾಯಸಮ್ಮತ ಭರವಸೆಯನ್ನು ಪಡೆಯುವುದಕ್ಕಾಗಿ ಲೆಕ್ಕಪರಿಶೋಧನಾ ವಿಧಾನವನ್ನು ಪೂರ್ವಭಾವಿಯಾಗಿ ಯೋಜಿಸುವುದು ಹಾಗೂ ಅದನ್ನು ಕಾರ್ಯಗತಗೊಳಿಸುವ ಅಗತ್ಯತೆಯನ್ನು ಆ ಮಾನದಂಡಗಳು ಹಾಗೂ ಮಾರ್ಗಸೂಚಿ ಹೊಂದಿರುತ್ತವೆ..

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ವ್ಯವಸ್ಥೆಯ ಸಮರ್ಪಕತೆ ಹಾಗೂ ಅವುಗಳ ಕಾರ್ಯಾಚರಣೆಯ ಪರಿಣಾಮಕಾರಿತ್ವದ ಬಗ್ಗೆ ಲೆಕ್ಕಪರಿಶೋಧನಾ ಸಾಕ್ಷಾಧಾರಗಳನ್ನು ಪಡೆದುಕೊಳ್ಳುವುದಕ್ಕಾಗಿ ಕಾರ್ಯಾಚರಣೆಗಳನ್ನು ನಡೆಸುವುದನ್ನು ನಮ್ಮ ಲೆಕ್ಕಪರಿಶೋಧನೆಯು ಒಳಗೊಂಡಿರುತ್ತದೆ. ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣದ ನಮ್ಮ ಲೆಕ್ಕಪರಿಶೋಧನೆಯು, ಹಣಕಾಸು ವರದಿಯ ಮೇಲೆ ಆಂತರಿಕ ನಿಯಂತ್ರಣಗಳನ್ನು ಅರ್ಥ ಮಾಡಿಕೊಳ್ಳುವುದು, ಇರಬಹುದಾದ ವಿಷಯಕ ದುರ್ಬಲತೆಯ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದು ಹಾಗೂ ನಿರ್ಧಾರಣೆ ಮಾಡಲಾದ ಸಂಭಾವ್ಯ ಅಪಾಯದ ಆಧಾರದ ಮೇರೆಗೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದನ್ನು ಒಳಗೊಂಡಿದೆ. ಆಯ್ಕೆಮಾಡಿಕೊಳ್ಳಲಾದ ಕಾರ್ಯವಿಧಾನವು ಹಣಕಾಸು ತ:ಖ್ತೆಗಳಲ್ಲಿನ ವಂಚನೆಗಳ ಕಾರಣವಾಗಿರಲಿ ಅಥವಾ ತಪ್ಪುಗಳನ್ನು ಎಸಗುವ ಕಾರಣಗಳಿಂದಾಗಿರಲೀ ವಿಷಯಕ ತಪ್ಪು ಹೇಳಿಕೆಗಳ ಸಂಭಾವ್ಯ ಅಪಾಯವನ್ನು ನಿರ್ಧಾರಣೆ ಮಾಡುವುದನ್ನೂ ಒಳಗೊಂಡಂತೆ ಲೆಕ್ಕಪರಿಶೋಧಕರ ತೀರ್ಮಾನವನ್ನು ಅವಲಂಭಿಸಿರುತ್ತದೆ

ನಾವು ಪಡೆದುಕೊಂಡಂತಹ ಲೆಕ್ಕಪರಿಶೋಧನಾ ಸಾಕ್ಷಾಧಾರಗಳು ನಿಗಮದ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯ ಮೇಲೆ ನಮ್ಮ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ದೃಷ್ಟಿಯಿಂದ ಒಂದು ಆಧಾರವನ್ನು ಒದಗಿಸುವುದಕ್ಕಾಗಿ ಸಮರ್ಪಕವಾಗಿವೆ ಹಾಗೂ ಸೂಕ್ತವಾಗಿವೆ ಎಂಬ ವಿಶ್ವಾಸವು ನಮಗಿದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ತಾತ್ಪರ್ಯ/ಪ್ರಾಮುಖ್ಯತೆ

ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು, ಹಣಕಾಸು ವರದಿಯ ವಿಶ್ವಸನೀಯತೆಯನ್ನು ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದಕ್ಕಾಗಿ ವಿನ್ಯಾಸಗೊಳಿಸುವ ಹಾಗೂ ಒಂದು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವ ಒಂದು ಪ್ರಕ್ರಿಯೆಯಾಗಿರುತ್ತದೆ. ಹಣಕಾಸು ವರದಿಯ ಮೇಲೆ ಒಂದು ನಿಗಮದ ಆಂತರಿಕ ಹಣಕಾಸು ನಿಯಂತ್ರಣವು, (1) ನಿಗಮದ ಆಸ್ತಿಗಳ ವ್ಯವಹಾರಗಳು ಮತ್ತು ವಿನ್ಯಾಸ/ವ್ಯವಸ್ಥೆಯನ್ನು ನ್ಯಾಯಸಮ್ಮತವಾದಂತಹ ಮತ್ತು ಯಥಾರ್ಥತೆಯಿಂದ ಕೂಡಿದ ರೀತಿಯಲ್ಲಿ ತೋರಿಸುವುದು (2) ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರ ಪ್ರತ್ಯೇಕ ಹಣಕಾಸು ತ:ಖ್ತೆಗಳನ್ನು ತಯಾರಿಸುವಲ್ಲಿ ಅನುಮತಿ ನೀಡುವ ಸಲುವಾಗಿ ಅಗತ್ಯವಿರುವಂತೆ ವ್ಯವಹಾರಗಳನ್ನು ದಾಖಲಿಸಲಾಗಿದೆ ಹಾಗೂ ನಿಗಮದ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ನಿಗಮದ ವ್ಯವಸ್ಥಾಪನೆ/ಆಡಳಿತ ಮಂಡಳಿಯ ಮತ್ತು ನಿರ್ದೇಶಕರುಗಳ ಅನುಮತಿಯ ಅನುಸಾರವೇ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ನ್ಯಾಯಸಮ್ಮತ ಭರವಸೆಯನ್ನು ಒದಗಿಸುವುದು (3) ಪ್ರತ್ಯೇಕ ಹಣಕಾಸು ತ:ಖ್ತೆಗಳ ಮೇಲೆ ಒಂದು ವಿಷಯಕ ಪ್ರಭಾವವನ್ನು ಹೊಂದಿರುವಂತಹ ನಿಗಮದ ಆಸ್ತಿಗಳ ಅನಧಿಕೃತ

ಸ್ವಾಧೀನತೆ, ಬಳಕೆ ಅಥವಾ ವಿಲೇವಾರಿಯನ್ನು ತಡೆಯುವುದು ಅಥವಾ ಸಮಯೋಚಿತವಾಗಿ ಪತ್ತೆಹಚ್ಚುವುದನ್ನು ಒಳಗೊಂಡಿರುತ್ತದೆ.

ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳು

ವಂಚನೆ/ಒಳಸಂಚಿನ ಸಂಭಾವ್ಯತೆ ಅಥವಾ ಸಮರ್ಪಕ ಆಡಳಿತವು ನಿಯಂತ್ರಣಗಳನ್ನು ಕಡೆಗಣಿಸುವುದು, ಇವುಗಳನ್ನೂ ಒಳಗೊಂಡಂತೆ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಅಂತರ್ಗತ ಇತಿಮಿತಿಗಳ ಕಾರಣ ವಿಷಯಕ ತಪ್ಪು ಹೇಳಿಕೆಗಳು ಅಥವಾ ವಂಚನೆಗಳು ಸಂಭವಿಸಬಹುದು ಹಾಗೂ ಅವುಗಳನ್ನು ಪತ್ತೆ ಹಚ್ಚಲು ಸಾಧ್ಯವಾಗದಿರಬಹುದು. ಅಲ್ಲದೆಯೇ, ಭವಿಷ್ಯದ ಅವಧಿಗಳಿಗೆ ಸಂಬಂಧಿತ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಪ್ರಕ್ಷೇಪಿಸುವುದು ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣವು ಸ್ಥಿತಿಗತಿಗಳಲ್ಲಿನ ಬದಲಾವಣೆ ಅಥವಾ ಕಾರ್ಯನೀತಿಗಳು ಅಥವಾ ಕಾರ್ಯವಿಧಾನಗಳು ಹಾಳಾಗುವುದರ ಕಾರಣ ಅಸಮರ್ಪಕಗೊಳ್ಳುವ ಸಂಭಾವ್ಯ ಅಪಾಯದ ಷರತ್ತಿಗೆ ಒಳಪಟ್ಟಿರುತ್ತದೆ.

ನಮ್ಮ ಷರತ್ತುಬದ್ಧ ಅಭಿಪ್ರಾಯ

ನಮಗೆ ಒದಗಿಸಲಾಗಿರುವ ಮಾಹಿತಿಯಂತೆ ಮತ್ತು ನೀಡಲಾಗಿರುವ ವಿವರಣೆಗಳಂತೆ ಹಾಗೂ ನಾವು ಕೈಗೊಂಡ ಲೆಕ್ಕಪರಿಶೋಧನೆಯ ಪ್ರಕ್ರಿಯೆಗಳ ಅನುಸಾರ, 31 ಮಾರ್ಚ್ 2018ರಲ್ಲಿದ್ದಂತೆ ಈ ಕೆಳಗಿನ ವಿಷಯಕ ದುರ್ಬಲತೆಗಳನ್ನು ಗುರುತಿಸಲಾಯಿತು:

1. ಸ್ಥಿರಾಸ್ತಿಗಳ ವಹಿಯ ನಿರ್ವಹಣೆ, ಸ್ಥಿರಾಸ್ತಿಗಳ ನಿಯತಕಾಲಿಕವಾದಂತಹ ಭೌತಿಕ ಪರಿಶೀಲನೆ ಮತ್ತು ಲೆಕ್ಕಪತ್ರಗಳಲ್ಲಿ ಪರಿಗಣನೆಗಾಗಿ ದುರ್ಬಲಗೊಂಡಿರುವಿಕೆಯನ್ನು ಖಚಿತಪಡಿಸಿಕೊಳ್ಳುವುದು ಇತ್ಯಾದಿಗಳಿಗೆ ಸಂಬಂಧಿಸಿದಂತೆ ನಿಗಮವು ಒಂದು ಸೂಕ್ತವಾದಂತಹ ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿರುವುದಿಲ್ಲ.

2. ನಿಗಮವು, ಸ್ವೀಕರಿಸಬೇಕಾದವುಗಳ ಸಮಯೋಚಿತ ಸಮನ್ವಯಗೊಳಿಸುವಿಕೆ ಮತ್ತು ಶಿಲ್ಕುಗಳನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಸೂಕ್ತವಾದಂತಹ ಆಂತರಿಕ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿರುವುದಿಲ್ಲ, ಅದು ವಿವಾದಗಳು ಮತ್ತು ಲೆಕ್ಕವನ್ನಿಡುವಿಕೆಯಲ್ಲಿನ ತಪ್ಪುಗಳ ಕಾರಣ ವಸೂಲಾತಿಯಾಗಬೇಕಾದ ಮೊತ್ತದ ಮೇಲೆ ಸಂಭಾವ್ಯ ಪ್ರಭಾವವನ್ನು ಹೊಂದಿರುತ್ತದೆ.

3. ಆನ್‌ಲೈನ್ ಮೂಲಕ ಮುಂಗಡ ಕಾಯ್ದಿರಿಸಿರುವಿಕೆಯ ವ್ಯವಸ್ಥೆಯನ್ನು ಎಲ್ಲಾ ಘಟಕಗಳ ನಡುವೆ ಸಮನಾಗಿ ಕಾರ್ಯಗತಗೊಳಿಸಿರಲಿಲ್ಲ, ಇದು ವರಮಾನದ ಸಂಭಾವ್ಯ ಸೋರಿಕೆಗೆ ಅಥವಾ ಪ್ರವಾಸಿಗರು ನೆಲೆಸಿರುವಿಕೆ ದಿನಗಳನ್ನು ಕಡಿಮೆ ಪ್ರಮಾಣದಲ್ಲಿ ಬಳಸಿಕೊಳ್ಳುವಲ್ಲಿಗೆ ದಾರಿ ಮಾಡಿಕೊಡಬಹುದು.

4. ಆನ್‌ಲೈನ್ ಕಾಯ್ದಿರಿಸಿರುವಿಕೆಯು ಒಂದು ಪ್ರತ್ಯೇಕ ಪ್ಯಾಕೇಜು ಆಗಿರುತ್ತದೆ ಮತ್ತು ಲೆಕ್ಕವನ್ನಿಡುವಿಕೆಯ ತಂತ್ರಾಂಶ ಅನ್ವಯದ ಜೊತೆ ಇದನ್ನು ಸಮನ್ವಯಗೊಳಿಸಿರುವುದಿಲ್ಲ, ಇದರಿಂದಾಗಿ ವರಮಾನವನ್ನು ಲೆಕ್ಕಕ್ಕೆ ತೆಗೆದುಕೊಳ್ಳದಿರುವ ಸಾಧ್ಯತೆಯೆಡೆಗೆ ದಾರಿ ಮಾಡಿಕೊಡುತ್ತದೆ.

5. ಇಲಾಖೆಗಳ ನಡುವೆ ದಾಖಲೆಗಳ ವ್ಯವಸ್ಥಿತ ಹರಿವಿನಲ್ಲಿ ನಿಯಂತ್ರಣ ದುರ್ಬಲತೆಯಿದ್ದಿತು, ಇದು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ವ್ಯವಹಾರಗಳನ್ನು ಕೈಬಿಡುವ, ತಪ್ಪಾಗಿ ದಾಖಲಿಸುವ ಅಥವಾ ಸಮಯೋಚಿತವಾಗಿ ದಾಖಲಿಸದಿರುವಲ್ಲಿ ಪರಿಣಮಿಸಬಹುದು.

6. ಸಣ್ಣ ಪುಟ್ಟ ನಗದು ವೆಚ್ಚಗಲ ಮೂಲಕ ಮಾಡಲಾದ ಖರೀದಿಗಳಿಗೆ ಮತ್ತು ಅಂತಹುದೇ/ಇತರೆ ವೆಚ್ಚಗಳಿಗೆ ಸಂಬಮಧಿಸಿದ ವಿವಿಧ ಉದ್ಯೋಗಿಗಳ ವ್ಯವಹಾರಗಳನ್ನು ಪ್ರಾರಂಭಿಸುವ ಮತ್ತು ಮುಕ್ತಾಯಗೊಳಿಸುವ ಒಂದು ವಿವೇಚನಾಯುಕ್ತ ವ್ಯವಸ್ತೆಯನ್ನು ಅನುಸರಿಸಿರುವುದಿಲ್ಲ

ಒಂದು 'ವಿಷಯಕ ದುರ್ಬಲತೆಯು' ಒಂದು ನ್ಯೂನತೆಯಾಗಿರುತ್ತದೆ, ಅಥವಾ ದುರ್ಬಲತೆಗಳ ಒಂದು ಸಂಯೋಜಿತ ದುರ್ಬಳಕೆಗಳಾಗಿರುತ್ತವೆ, ಅವುಗಳು, ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸು ತ:ಖ್ತೆಗಳಿಗೆ ಸಂಬಂಧಿಸಿದಂತೆ ವಿಷಯಕ ತಪ್ಪು ಹೇಳಿಕೆಗಳನ್ನು ತಡೆಹಿಡಿಯದಿರುವ ಹಾಗೂ ಸಮಯೋಚಿತವಾಗಿ ಪತ್ತೆಹಚ್ಚದಿರುವ ನ್ಯಾಯಸಮ್ಮತ ಸಾಧ್ಯತೆಯಿರುವಂತಹುದಾಗಿರುತ್ತವೆ.

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಮಾನದಂಡದ ಉದ್ದೇಶಗಳ ಸಾಧನೆಯ ಮೇಲೆ ಮೇಲೆ ವಿವರಿಸಲಾದಂತಹ ವಿಷಯಕ ದುರ್ಬಲತೆಯ ಸಂಭಾವ್ಯ ಪರಿಣಾಮಗಳ ಹೊರತಾಗಿ, ಭಾರತೀಯ ಚಾರ್ಟರ್ಡ್ ಅಕೌಂಟೆಂಟ್‌ಗಳ ಸಂಸ್ಥೆಯಿಂದ ನೀಡಲ್ಪಟ್ಟಿರುವ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣಗಳ ಬಗ್ಗೆ ಮಾರ್ಗಸೂಚಿ ಟಿಪ್ಪಣಿಯಲ್ಲಿ ತಿಳಿಸಲಾಗಿರುವ ಆಂತರಿಕ ನಿಯಂತ್ರಣಗಳ ಅತ್ಯಗತ್ಯ ಭಾಗಗಳನ್ನು ಪರಿಗಣಿಸಿದಂತೆ ಕಂಪನಿಯು ಸ್ಥಾಪಿಸಿದ್ದಂತಹ ಹಣಕಾಸು ವರದಿಯ ಮೇಲೆ ಆಂತರಿಕ ಹಣಕಾಸು ನಿಯಂತ್ರಣ ಮಾನದಂಡಗಳ ಆಧಾರದ ಮೇರೆಗೆ ಕಂಪನಿಯು ಎಲ್ಲಾ ವಿಷಯಕಗಳಿಗೆ ಸಂಬಂಧಿಸಿದಂತೆ, ಹಣಕಾಸು ವರದಿಯ ಮೇಲೆ ಸಮರ್ಪಕ ಆಂತರಿಕ ಹಣಕಾಸು ನಿಯಂತ್ರಣ ವ್ಯವಸ್ಥೆಯನ್ನು ನಿರ್ವಹಿಸಿದೆ ಹಾಗೂ ಹಣಕಾಸು ವರದಿಯ ಮೇಲೆ ಅಂತಹ ಆಂತರಿಕ ಹಣಕಾಸು ನಿಯಂತ್ರಣಗಳನ್ನು 31 ಮಾರ್ಚ್ 2018ರಲ್ಲಿದ್ದಂತೆ ಪರಿಣಾಮಕಾರಿತ್ವದಿಂದ ಕಾರ್ಯಾಚರಣೆಗೊಳಿಸಲಾಗಿದ್ದಿತು.,

ನಿಗಮದ 31 ಮಾರ್ಚ್ 2018ರಲ್ಲಿದ್ದಂತೆ ಹಣಕಾಸು ತ:ಖ್ತೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ನಾವು ಅಳವಡಿಸಿಕೊಂಡಂತಹ ಲೆಕ್ಕಪರಿಶೋಧನಾ ಪರೀಕ್ಷಣೆಗಳ ಸ್ವರೂಪ, ಸಮಯ ಮತ್ತು ವಿಸ್ತಾರವನ್ನು ನಿರ್ಧಾರಣೆ ಮಾಡುವಲ್ಲಿ ಗುರುತಿಸಲಾದಂತಹ ಮತ್ತು ಮೇಲೆ ತಿಳಿಸಲಾದಂತಹ ವಿಷಯಕ ದುರ್ಬಲತೆಗಳನ್ನು ನಾವು ಪರಿಗಣಿಸಿರುವೆವು ಹಾಗೂ ಈ ವಿಷಯಕ ದುರ್ಬಲತೆಗಳು ನಿಗಮದ ಪ್ರತ್ಯೇಕ ಹಣಕಾಸು ತ:ಖ್ತೆಗಳ ಮೇಲೆ ನಮ್ಮ ಅಭಿಪ್ರಾಯದ ಮೇಲೆ ಯಾವುದೇ ಪರಿಣಾಮವನ್ನೂ ಬೀರುವುದಿಲ್ಲ.

ಪಿ.ವಿ. ಮೆನನ್ ಅಂಡ್ ಶೇಖರ್ ಅಸೋಸಿಯೇಟ್ಸ್‌ಗಾಗಿ
ಚಾರ್ಟರ್ಡ್ ಅಕೌಂಟೆಂಟ್‌ಗಳು
ಸಂಸ್ಥೆಯ ನೋಂದಣಿ ಸಂಖ್ಯೆ 002066ಎಸ್

ಸಹಿ/–
ಪಿ.ವಿ. ಮೆನನ್
(ಪಾಲುದಾರರು)
ಸದಸ್ಯತ್ವ ಸಂಖ್ಯೆ:018644

ಸ್ಥಳ : ಬೆಂಗಳೂರು
ದಿನಾಂಕ : 19 ಡಿಸೆಂಬರ್ 2018

ಅನುಬಂಧ – 2 ಎ
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಭೂಮಿಯನ್ನು ಹೊಂದಿರುವ ಆಸ್ತಿಗಳ ವಿವರಗಳು

ಎ. ಸ್ಥಿರಾಸ್ತಿಗಳಲ್ಲಿ ಸೇರಿರುವ ಭೂಮಿ – ಇವುಗಳಿಗೆ ಗುತ್ತಿಗೆ ಒಡಂಬಡಿಕೆಗಳು ಲಭ್ಯವಿರುವುದಿಲ್ಲ

ಕ್ರಮ ಸಂಖ್ಯೆ	ಆಸ್ತಿಯ ವಿವರಣೆ	ವಿಸ್ತೀರ್ಣ ಎಕರೆಗಳು ಅಥವಾ ಚದರ ಅಡಿಗಳು	ಬಳಕೆ / ಹೋಟೆಲ್‌ಗಾಗಿ ಗಾಲ್ಫ್ ಕೋರ್ಸಿಗಾಗಿ ಬಳಸಲಾಗುತ್ತಿರುವುದೆ ಅಥವಾ ಖಾಲಿ ಇರುವುದೆ	ಅವಿಭಾತಿತವೋ ಅಥವಾ ಗುತ್ತಿಗೆ ಹಿಡುವಳಿಯೊ	ಸ್ಥಿರಾಸ್ತಿ ಷೆಡ್ಯೂಲಿನಲ್ಲಿ ಸೇರಿಸಲಾಗಿರುವ ಮೌಲ್ಯ ರೂಪಾಯಿಗಳು
1	ಮರವಂತೆಯಲ್ಲಿನ ಭೂಮಿ	0.38	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಗುತ್ತಿಗೆ ಹಿಡುವಳಿ	12,411
2	ಮಲ್ಪೆಯಲ್ಲಿನ ಭೂಮಿ	0.7 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಗುತ್ತಿಗೆ ಹಿಡುವಳಿ	28,504
3	ಚಲ್ಲಿಗಟ್ಟದಲ್ಲಿನ ಭೂಮಿ	124 ಎಕರೆಗಳು	ಕರ್ನಾಟಕ ಗಾಲ್ಫ್ ಅಸೋಸಿಯೇಷನ್	ಗುತ್ತಿಗೆ ಹಿಡುವಳಿ	26,16,884
4	ಬೆಳಗಾವಿ	168 ಎಕರೆಗಳು	ಗಾಲ್ಫ್ ಕ್ಲಬ್	ಗುತ್ತಿಗೆ ಹಿಡುವಳಿ	168
					26,57,967

ಬಿ. ಸ್ಥಿರಾಸ್ತಿಗಳ ಷೆಡ್ಯೂಲಿನಲ್ಲಿ ಇರದ ಹಾಗೂ ಹಕ್ಕು ಪತ್ರಗಳು/ಗುತ್ತಿಗೆ ಒಡಂಬಡಿಕೆಗಳು ಲಭ್ಯವಿರದ ಭೂಮಿ

ಕ್ರಮ ಸಂಖ್ಯೆ	ಆಸ್ತಿಯ ವಿವರಣೆ	ವಿಸ್ತೀರ್ಣ ಎಕರೆಗಳು ಅಥವಾ ಚದರ ಅಡಿಗಳು	ಬಳಕೆ / ಹೋಟೆಲ್‌ಗಾಗಿ ಗಾಲ್ಫ್ ಕೋರ್ಸಿಗಾಗಿ ಬಳಸಲಾಗುತ್ತಿರುವುದೆ ಅಥವಾ ಖಾಲಿ ಇರುವುದೆ	ಅವಿಭಾತಿತವೋ ಅಥವಾ ಗುತ್ತಿಗೆ ಹಿಡುವಳಿಯೊ	ಸ್ಥಿರಾಸ್ತಿ ಷೆಡ್ಯೂಲಿನಲ್ಲಿ ಸೇರಿಸಲಾಗಿರುವ ಮೌಲ್ಯ ರೂಪಾಯಿಗಳು
1	ಹೋಟೆಲ್ ಮಯೂರ, ಗೇರುಸೊಪ್ಪ	2.33 ಎಕರೆಗಳು	ಹೋಟೆಲು	ಆರ್‌ಟಿಸಿ	ಇಲ್ಲ
2	ಹೋಟೆಲ್ ಮಯೂರ, ಭುವನೇಶ್ವರಿ	3.60 ಎಕರೆಗಳು	ಹೋಟೆಲು	ಆರ್‌ಟಿಸಿ	ಇಲ್ಲ
3	ಹೋಟೆಲ್ ಮಯೂರ, ವಿಜಯನಗರ	1.25 ಎಕರೆಗಳು	ಹೋಟೆಲು	–	ಇಲ್ಲ
4	ಹೋಟೆಲ್ ಮಯೂರ ವೇಲಪುರಿ	51688.72 ಚದರ ಅಡಿ	ಹೋಟೆಲು	ಆರ್‌ಟಿಸಿ	ಇಲ್ಲ
5	ಹೋಟೆಲ್ ಮಯೂರ ಶಾಂತಲ	7256 ಚದರ ಮೀಟರು	ಹೋಟೆಲು	ಆರ್‌ಟಿಸಿ	ಇಲ್ಲ
6	ಹೋಟೆಲ್ ಮಯೂರ ಸುದರ್ಶನ	1.481 ಹೆಕ್ಟೇರುಗಳು	ಹೋಟೆಲು	ಇಲ್ಲ	ಇಲ್ಲ
7	ಹೋಟೆಲ್ ಮಯೂರ ತಲಕಾವೇರಿ	0.67 ಸೆಂಟ್ಸ್	ಹೋಟೆಲು	ಆರ್‌ಟಿಸಿ	ಇಲ್ಲ
8	ಹೋಟೆಲ್ ಮಯೂರ ಕಾವೇರಿ ಕೃರಾಸಾ	16625 ಚದರ ಅಡಿ	ಹೋಟೆಲು	–	ಇಲ್ಲ
9	ಹೋಟೆಲ್ ಮಯೂರ ರಿವರ್ ವ್ಯೂ	3.30 ಎಕರೆಗಳು	ಹೋಟೆಲು	ಆರ್‌ಟಿಸಿ	–

10	ಹೋಟೆಲ್ ಮಯೂರ ಪೈನ್ ಟಾಪ್	13 ಗುಂಟೆಗಳು	ಹೋಟೆಲು	ಇಲ್ಲ	ಇಲ್ಲ
11	ಹೋಟೆಲ್ ಮಯೂರ ನಿಸರ್ಗಾ ರೆಸ್ಟೋರೆಂಟ್	2.55 ಎಕರೆಗಳು	ಹೋಟೆಲು	ಲಭ್ಯವಿರುವುದಿಲ	ಹೌದು
12	ಹೋಟೆಲ್ ಮಯೂರ ದುರ್ಗ	–	ಹೋಟೆಲು	ಲಭ್ಯವಿರುವುದಿಲ್ಲ	ಇಲ್ಲ
13	ಹೋಟೆಲ್ ಮಯೂರ ಸಂಗಮ	–	ಹೋಟೆಲು	ಲಭ್ಯವಿರುವುದಿಲ್ಲ	ಇಲ್ಲ
14	ಹೋಟೆಲ್ ಮಯೂರ ಬರಚುಕ್ಕಿ	–	ಹೋಟೆಲು	ಲಭ್ಯವಿರುವುದಿಲ್ಲ	ಇಲ್ಲ
15	ರಸ್ತೆ ಬದಿ ಅನುಕೂಲತೆ (ವೇಸೈಡ್ ಫೆಸಿಲಿಟಿ), ಸಸ್ತಾಪುರ	2442.528 ಚದರ ಅಡಿ	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಆರ್‌ಟಿಸಿ	ಹೌದು
16	ರಸ್ತೆ ಬದಿ ಅನುಕೂಲತೆ (ವೇಸೈಡ್ ಫೆಸಿಲಿಟಿ), ಹುಮನಾಬಾದ್	6 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
17	ಹೋಟೆಲ್ ಮಯೂರ ಪವಿತ್ರ ಯಡಿಯೂರು	–	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಲಭ್ಯವಿರುವುದಿಲ್ಲ	ಇಲ್ಲ
18	ಹೋಟೆಲ್ ಮಯೂರ ಅಪೂರ್ವ, ಮುಳುಬಾಗಿಲು	3 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
19	ಹೋಟೆಲ್ ಮಯೂರ ಪ್ರಕೃತಿ, ಮೇಲ್ಕಮ್ಮನ ಹಳ್ಳಿ	–	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
20	ಫಸ್ಟ್ ಫುಡ್ ಕೌಂಟರ್, ರಾಮನಗರ	1 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಆರ್‌ಟಿಸಿ	ಇಲ್ಲ
21	ರಸ್ತೆ ಬದಿ ಅನುಕೂಲತೆ (ವೇಸೈಡ್ ಫೆಸಿಲಿಟಿ), ಲೋಕಾಪುರ	3 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಆರ್‌ಟಿಸಿ	ಇಲ್ಲ
22	ರಸ್ತೆ ಬದಿ ಅನುಕೂಲತೆ (ವೇಸೈಡ್ ಫೆಸಿಲಿಟಿ), ಮೊದಲಘಟ್ಟ	3 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
23	ರಸ್ತೆ ಬದಿ ಅನುಕೂಲತೆ (ವೇಸೈಡ್ ಫೆಸಿಲಿಟಿ), ಬಳ್ಳಿಗಾವಿ	1.21 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
24	ಟೂರಿಸ್ಟ್ ಕಾಂಪ್ಲೆಕ್ಸ್, ಗ್ ಗಟ್ಟಿಗೋಡಿ	1 ಎಕರೆ	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
25	ಯಾತ್ರಿ ನಿವಾಸ, ಸಿರ್ಸಿ	0.20 ಎಕರೆ	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಆರ್‌ಟಿಸಿ ಮತ್ತು ತೆರಿಗೆ ರಸೀದಿ	ಇಲ್ಲ
26	ರಸ್ತೆ ಬದಿ ಅನುಕೂಲತೆ (ವೇಸೈಡ್ ಫೆಸಿಲಿಟಿ), ಹುನಗುಂದ	2 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿ	ಇಲ್ಲ	ಇಲ್ಲ

			ಸು, ನಿರ್ವಹಿಸು ಹಾಗೂ ವರ್ಗಾಯಿಸು		
27	ರಸ್ತೆ ಬದಿ ಅನುಕೂಲತೆ (ವೇ ಸೈಡ್ ಫೆಸಿಲಿಟಿ), ಕೂಡ್ಲಗಿ	3 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
28	ಯಾತ್ರಿ ನಿವಾಸ, ಶೃಂಗೇರಿ	1.25 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
29	ಯಾತ್ರಿ ನಿವಾಸ, ಹಾಸನ	ಎ 1040 ಚದರ ಅಡಿ ಮತ್ತು ಬಿ 1200 ಚದರ ಅಡಿ	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಲಭ್ಯವಿರುವುದಿಲ್ಲ	ಇಲ್ಲ
30	ಯಾತ್ರಿ ನಿವಾಸ, ಸವದತ್ತಿ	3 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
31	ಶಿವನಸಮುದ್ರ (ಶಿಂಷಾ) ರೆಸ್ಟೋರೆಂಟ್, ಶಿವನಸಮುದ್ರ	1.19 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
32	ಯಾತ್ರಿ ನಿವಾಸ, ಕಲಬುರಗಿ	2,59,423 ಚದರ ಅಡಿ	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ತೆರಿಗೆ ರಸೀದಿ	ಹೌದು
33	ರಸ್ತೆ ಬದಿ ಅನುಕೂಲತೆ (ವೇ ಸೈಡ್ ಫೆಸಿಲಿಟಿ), ಮದ್ದೂರು	–	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಇಲ್ಲ	ಇಲ್ಲ
34	ಯಾತ್ರಿ ನಿವಾಸ, ಧಾರವಾಡ	2500 ಚದರ ಅಡಿ	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಲಭ್ಯವಿರುವುದಿಲ್ಲ	ಇಲ್ಲ
35	ಮಯೂರ, ದೊಡ್ಡ ಆಲದ ಮರ, ರಾಮೋ ಹಳ್ಳಿ	0.39 ಎಕರೆಗಳು	ನವೀಕರಿಸು, ಕಾರ್ಯಾಚರಣೆಗೊಳಿಸು, ನಿರ್ವಹಿಸು ಹಾಗೂ ವರ್ಗಾಯಿಸು	ಲಭ್ಯವಿರುವುದಿಲ್ಲ	ಇಲ್ಲ

ಮೇಲಿನ ಪಟ್ಟಿಯು, ಬಾಡಿಗೆಗೆ ತೆಗೆದುಕೊಳ್ಳಲಾಗಿರುವಂತಹ ಕಟ್ಟಡಗಳನ್ನು ಒಳಗೊಂಡಿರುವುದಿಲ್ಲ.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
31 ಮಾರ್ಚ್ 2018ರಲ್ಲಿದ್ದಂತೆ ಆಸ್ತಿ ಮತ್ತು ಜವಾಬ್ದಾರಿ ತ:ಖ್ತೆ

(ಮೊತ್ತ ರೂಪಾಯಿಗಳಲ್ಲಿ)

	ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
ಎ	**ಈಕ್ವಿಟಿ ಹಾಗೂ ಜವಾಬ್ದಾರಿಗಳು**			
1	**ಷೇರುದಾರರ ನಿಧಿಗಳು**			
	(ಎ)ಷೇರು ಬಂಡವಾಳ	3	6,41,36,000	6,41,36,000
	(ಬಿ)ಕಾದಿರಿಸಿರುವಿಕೆಗಳು ಹಾಗೂ ಮಿಗುತಾಯಗಳು	4	50,12,70,173	48,37,66,962
	ಉಪ– ಮೊತ್ತ		**56,54,06,173**	**54,79,02,962**
2	**ಚಾಲ್ತಿಯೇತರ ಜವಾಬ್ದಾರಿಗಳು**			
	(ಎ)ದೀರ್ಘಾವಧಿ ಸಾಲಗಳು	**5**	4,00,00,000	4,58,05,346
	(ಬಿ)ಇತರೆ ದೀರ್ಘಾವಧಿ ಜವಾಬ್ದಾರಿಗಳು	**6**	5,27,88,715	4,93,28,562
	(ಸಿ) ದೀರ್ಘಾವಧಿ ಅನುವುಗಳು	**7**	6,24,19,410	6,16,86,315
	ಉಪ– ಮೊತ್ತ		**15,52,08,125**	**15,68,20,223**
3.	**ಚಾಲ್ತಿ ಜವಾಬ್ದಾರಿಗಳು**			
	(ಎ) ವ್ಯಾಪಾರ–ವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದವುಗಳು	**8**	3,47,69,703	5,84,13,116
	(ಬಿ)ಇತರೆ ಚಾಲ್ತಿ ಜವಾಬ್ದಾರಿಗಳು	**9**	33,62,96,404	31,57,38,487
	(ಸಿ) ಅಲ್ಪಾವಧಿ ಅನುವುಗಾಳು	**10**	1,36,19,028	3,07,05,778
	ಉಪ–ಮೊತ್ತ		**38,46,85,135**	**40,48,57,382**
	ಒಟ್ಟು ಮೊತ್ತ		**1,10,52,99,433**	**1,10,95,80,567**
ಬಿ	**ಆಸ್ತಿಗಳು**			
4	**ಚಾಲ್ತಿಯೇತರ ಆಸ್ತಿಗಳು**			
	(1)ಸ್ಥಿರಾಸ್ತಿಗಳು			
	(ಎ)ಸ್ಥಿರಾಸ್ತಿಗಳು– ಸ್ಪರ್ಶಿಸಬಹುದಾದ	**11**	45,61,89,033	39,06,86,924
	(ಬಿ)ಸ್ಥಿರಾಸ್ತಿಗಳು–ಸ್ಪರ್ಶಿಸಲಾಗದ	**12**	4,48,575	3,72,502
	(ಸಿ)ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	**12**	3,74,26,952	4,70,34,157

	(ಡಿ)ಚಾಲ್ತಿಯೇತರ ಹೂಡಿಕೆಗಳು	**13**	42,06,000	42,06,000
	(ಇ)ದೀರ್ಘಾವಧಿ ಸಾಲಗಳು ಮತ್ತು ಮುಂಗಡಗಳು	**14**	6,72,42,509	7,16,55,495
	(ಎಫ್) ಇತರೆ ಚಾಲ್ತಿಯೇತರ ಆಸ್ತಿಗಳು	**15**	2,46,11,086	1,66,56,699
	ಉಪ–ಮೊತ್ತ		**59,01,24,154**	**53,06,11,777**
5	**ಚಾಲ್ತಿ ಆಸ್ತಿಗಳು**			
	(ಎ)ಸರಕುಸಾಮಗ್ರಿ ದಾಸ್ತಾನುಗಳು	**16**	50,08,708	28,34,771
	(ಬಿ)ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಸ್ವೀಕರಿಸಬೇಕಾದವುಗಳು	**17**	1,77,66,285	1,82,80,129
	(ಸಿ)ನಗದು ಹಾಗೂ ನಗದಿಗೆ ಸಮಾನವಾದವುಗಳು	**18**	39,08,22,366	49,78,39,531
	(ಡಿ)ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು	**19**	38,02,528	41,27,098
	(ಇ)ಇತರೆ ಚಾಲ್ತಿ ಆಸ್ತಿಗಳು	**20**	9,77,75,392	5,58,87,262
	ಉಪ–ಮೊತ್ತ		**51,51,75,279**	**57,89,68,791**
	ಒಟ್ಟು ಮೊತ್ತ		**1,10,52,99,433**	**1,10,95,80,567**

ಲೆಕ್ಕಪತ್ರಗಳ ಜೊತೆಗಿರುವ ಟಿಪ್ಪಣಿಗಳು 1–46 ಹಣಕಾಸು ತ:ಖ್ತೆಗಳ ಅವಿಭಾಜ್ಯ ಅಂಗಗಳಾಗಿವೆ.

ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ಪಿ.ವಿ.ಮೆನನ್ ಅಂಡ್ ಆಸೋಸಿಯೇಟ್ಸ್‌ಗಾಗಿ ಮಂಡಳಿಯ ನಿರ್ದೇಶಕರುಗಳ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
ಸಂಸ್ಥೆಯ ನೋಂದಣಿ ಸಂಖ್ಯೆ 002066ಎಸ್

ಪಿ.ವಿ. ಮೆನನ್	ಸಾ ರಾ ಮಹೇಶ್	ಕುಮಾರ ಪುಷ್ಕರ್	ಟಿ.ಕೆ. ಅನಿಲ್ ಕುಮಾರ್
ಪಾಲುದಾರರು	ಗೌರವಾಧ್ಯಕ್ಷರ	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು
ಸದಸ್ಯತ್ವ ಸಂಖ್ಯೆ 018644	ಡಿಐಎನ್ ಸಂಖ್ಯೆ 01784020	ಡಿನ್ ಸಂಖ್ಯೆ 07606517	ಡಿನ್ ಸಂಖ್ಯೆ 067045770

ಸ್ಥಳ: ಬೆಂಗಳೂರು
ದಿನಾಂಕ: 19.12.2018

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
31 ಮಾರ್ಚ್ 2018ರಲ್ಲಿದ್ದಂತೆ ಲಾಭ ಮತ್ತು ನಷ್ಟದ ತ:ಖ್ತೆ

(ಮೊತ್ತ ರೂಪಾಯಿಗಳಲ್ಲಿ)

	ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್ 2018ರಲ್ಲಿದ್ದಂತೆ	31 ಮಾರ್ಚ್ 2017ರಲ್ಲಿದ್ದಂತೆ
	ಆದಾಯ			
1	ಕಾರ್ಯಾಚರಣೆಗಳಿಂದ ವರಮಾನ	21	56,31,42,572	50,79,56,563
2	ಇತರೆ ವರಮಾನ	22	4,37,20,900	9,31,12,926
3	**ಒಟ್ಟು ವರಮಾನ (1+2)**		**60,68,63,472**	**60,10,69,488**
4	**ವೆಚ್ಚಗಳು**			
	(ಎ) ಬಳಸಲಾದ ಸಾಮಗ್ರಿಗಳ ವೆಚ್ಚ	23ಎ	5,16,97,335	4,00,40,852
	(ಬಿ) ವ್ಯಾಪಾರವ್ಯವಹಾರದಲ್ಲಿನ ದಾಸ್ತಾನುಗಳ ಖರೀದಿಗಳು	23ಬಿ	3,06,05,651	3,03,28,748
	(ಸಿ)ಪೂರ್ಣಗೊಂಡಿರುವ ಸರಕುಗಳ ಸರಕುಸಾಮಗ್ರಿಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು ಮತ್ತು ವ್ಯಾಪಾರವ್ಯವಹಾರದ ಅಡಿಯಲ್ಲಿರುವ ದಾಸ್ತಾನು	23ಸಿ	(3,34,894)	23,096
	(ಡಿ)ಸಿಬ್ಬಂದಿ ಸೌಲಭ್ಯಗಳಿಗೆ ಸಂಬಂಧಿತ ವೆಚ್ಚ	24	20,02,19,865	17,20,18,641
	(ಇ) ಹಣಕಾಸು ವ್ಯವಸ್ಥೆಗೆ ಸಂಬಂಧಿತ ವೆಚ್ಚಗಳು	25	22,66,234	34,15,284
	(ಎಫ್) ಸವಕಳಿ ಹಾಗೂ ಮೂಲ ಬೆಲೆ/ವೆಚ್ಚಗಳನ್ನು ಕ್ರಮೇಣ ಕಳೆದುಹಾಕಿದ್ದಕ್ಕೆ ಸಂಬಂಧಿತ ವೆಚ್ಚಗಳು	26	1,98,10,656	1,82,60,009
	(ಜಿ) ಇತರೆ ವೆಚ್ಚಗಳು	27	31,73,74,513	30,44,94,471
	ಒಟ್ಟು ವೆಚ್ಚಗಳು		**62,16,39,359**	**56,85,81,101**
5	**ಪೂರ್ವಾವಧಿ ಬಾಬುಗಳು ಹಾಗೂ ತೆರಿಗೆಗೆ ಮುಂಚಿನ ಲಾಭ/ (ನಷ್ಟ) (3–4)**		**(1,47,75,887)**	**3,24,88,388**
6	**ಪೂರ್ವಾವಧಿ ಬಾಬುಗಳು**	**28**	**3,03,93,652**	**1,27,07,595**
7	**ತೆರಿಗೆಗಳ ಪಾವತಿಗೆ ಮುಂಚಿನ ಲಾಭ/(ನಷ್ಟ) (5–6)**		**1,56,17,765**	**4,51,95,983**
8	**ತೆರಿಗೆ ವೆಚ್ಚಗಳು**			
	ಪ್ರಸಕ್ತ ಸಾಲಿಗೆ ಪ್ರಸಕ್ತ ತೆರಿಗೆ ವೆಚ್ಚ		**59,00,000**	**1,66,53,030**
	(ಬಿ)ಕಳೆಯುವುದು: ಎಂಎಟಿ ಜಮೆ (ಅನ್ವಯಗೊಳ್ಳುವಲ್ಲಿ)		–	–
	(ಸಿ)ಹಿಂದಿನ ಸಾಲುಗಳಿಗೆ ಸಂಬಂಧಿತ ತೆರಿಗೆಯನ್ನು ಪ್ರಸಕ್ತ ಸಾಲಿನಲ್ಲಿ ಪಾವತಿ		**(35,90,087)**	**45,50,745**
	ನಿವ್ವಳ ಪ್ರಸಕ್ತ ಸಾಲಿನ ತೆರಿಗೆ ವೆಚ್ಚ		**23,09,913**	**2,12,03,775**
	ಮುಂದೂಡಲ್ಪಟ್ಟಿರುವ ತೆರಿಗೆ ಬಾಧ್ಯತೆ/(ಆಸ್ತಿ)		–	–

9	**ಮುಂದುವರಿದುಕೊಂಡು ಹೋಗುತ್ತಿರುವ ಕಾರ್ಯಾಚರಣೆಗಳಿಂದ ಲಾಭ/(ನಷ್ಟ) (7–8)**		**1,33,07,853**	**2,39,92,208**
10	**ಪ್ರಸಕ್ತ ಸಾಲಿಗೆ ಲಾಭ/(ನಷ್ಟ) (7+8)**		**1,33,07,853**	**2,39,92,208**
11	**ಈಕ್ವಿಟಿ ಷೇರು ಒಂದಕ್ಕೆ ಗಳಿಕೆಗಳು:**			
	(i) ಮೂಲ		**103.75**	**187.04**
	(ii) ದುರ್ಬಲಗೊಳಿಸಲಾದ/ಡೈಲ್ಯೂಟೆಡ್		**103.75**	**187.04**

ಲೆಕ್ಕಪತ್ರಗಳ ಜೊತೆಗಿರುವ 1–46 ಟಿಪ್ಪಣಿಗಳು ಹಣಕಾಸು ತ:ಖ್ತೆಗಳ ಅವಿಭಾಜ್ಯ ಅಂಗಗಳಾಗಿವೆ.

ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ಪಿ.ವಿ.ಮೆನನ್ ಅಂಡ್ ಆಸೋಸಿಯೇಟ್ಸ್‌ಗಾಗಿ ಮಂಡಳಿಯ ನಿರ್ದೇಶಕರುಗಳ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
ಸಂಸ್ಥೆಯ ನೋಂದಣಿ ಸಂಖ್ಯೆ 002066ಎಸ್

ಪಿ.ವಿ. ಮೆನನ್	ಸಾ ರಾ ಮಹೇಶ್	ಕುಮಾರ ಪುಷ್ಕರ್	ಟಿ.ಕೆ. ಅನಿಲ್ ಕುಮಾರ್	
ಪಾಲುದಾರರು	ಗೌರವಾಧ್ಯಕ್ಷರ	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು	
ಸದಸ್ಯತ್ವ ಸಂಖ್ಯೆ 018644	ಡಿಐಎನ್ ಸಂಖ್ಯೆ 01784020	ಡಿನ್ ಸಂಖ್ಯೆ 07606517	ಡಿನ್ ಸಂಖ್ಯೆ 067045770	

ಸ್ಥಳ: ಬೆಂಗಳೂರು
ದಿನಾಂಕ: 19.12.2018

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
31 ಮಾರ್ಚ್ 2018ಕ್ಕೆ ಅಂತ್ಯಗೊಂಡ ಸಾಲಿಗೆ ಹಣಕಾಸು ಹರಿವಿನ ತ:ಖ್ತೆ

ವಿವರಗಳು	2017–18	2017–18	2016–17	2016–17
ಕಾರ್ಯಾಚರಣೆ ಚಟುವಟಿಕೆಗಳಿಂದ ಹಣಕಾಸಿನ ಹರಿವು:				
ತೆರಿಗೆ ಮತ್ತು ವಿಶೇಷ ಬಾಬುಗಳಿಗೆ ಮುಂಚಿನ ನಿವ್ವಳ ಲಾಭ		1,33,07,853		2,39,92,208
ಕೂಡುವುದು: ಈ ಕೆಳಗಿನವುಗಳಿಗಾಗಿ ಹಣಕಾಸು ಹರಿವಿನ ಹೊಂದಾಣಿಕೆಗಳು :				
ಅನ್ವಯಿಸಲಾದಂತಹ ಅನುದಾನಗಳ ನಿವ್ವಳ ಸ್ವೀಕೃತಿಗಳು	5,08,66,736		39,24,35,082	
ಸವಕಳಿ ಮತ್ತು ಕ್ರಮೇಣ ಮೌಲ್ಯವನ್ನು ಇಳಿಮುಖಗೊಳಿಸಿರುವುದಕ್ಕೆ ಸಂಬಂಧಿತ ವೆಚ್ಚಗಳು:	1,98,10,656		1,82,60,009	
ಬಡ್ಡಿ ಹಾಗೂ ಹಣಕಾಸು ಸಾಲಗಳಿಗೆ ಸಂಬಂಧಿತ ವೆಚ್ಚಗಳು				

ಅವಧಿ ಸಾಲಗಳ ಮೇಲಿನ ಬಡ್ಡಿ	10,02,715		20,91,169	
ಇತರವುಗಳ ಮೇಲಿನ ಬಡ್ಡಿ	12,63,519		13,24,115	
ಕಳೆಯುವುದು :				
ಸ್ಥಿರಾಸ್ತಿಗಳ ಮಾರಾಟದ ಮೇಲಿನ ಲಾಭ	(14,30,104)		(88,898)	
ಗಳಿಸಲಾದ ಬಡ್ಡಿ	(70,58,576)		(74,59,172)	
ಷೇರು ಲಾಭಾಂಶದ ಆದಾಯ	(8,41,200)	6,36,13,747	(8,41,200)	40,57,21,106
ಕಾರ್ಯೋಪಯುಕ್ತ ಬಂಡವಾಳವು ಬದಲಾಗುವ ಮೊದಲು ಕಾರ್ಯಾಚರಣೆಗಳಿಂದ ಲಾಭ		**7,69,21,599**		**42,97,13,314**
ಈ ಕೆಳಗಿನವುಗಳಿಗಾಗಿ ಹಣಕಾಸು ಹರಿವಿನ ಹೊಂದಾಣಿಕೆಗಳನ್ನು ಕೂಡುವುದು/(ಕಳೆಯುವುದು) :				
ಸರಕುಸಾಮಗ್ರಿಗಳು ಇಳಿಮುಖಗೊಂಡಿರುವುದು/ (ಹೆಚ್ಚಳಗೊಂಡಿರುವುದು	(21,73,937)		35,267	
ಚಿಲ್ಲರೆ ಸಾಲಗಾರರು ಇಳಿಮುಖಗೊಂಡಿರುವುದು / (ಹೆಚ್ಚಳಗೊಂಡಿರುವುದು)	5,13,845		(54,08,760)	
ಸಾಲಗಳು ಮತ್ತು ಮುಂಗಡಗಳು ಇಳಿಮುಖಗೊಂಡಿರುವುದು / (ಹೆಚ್ಚಳಗೊಂಡಿರುವುದು)	3,24,570		(2,59,620)	
ಇತರೆ ಚಾಲ್ತಿ ಆಸ್ತಿಗಳು ಇಳಿಮುಖಗೊಂಡಿರುವುದು/ (ಹೆಚ್ಚಳಗೊಂಡಿರುವುದು	(4,18,88,131)		10,69,031	
ವ್ಯಾಪಾರವ್ಯವಹಾರ ಮತ್ತು ಇತರೆ ಜವಾಬ್ದಾರಿಗಳು ಹೆಚ್ಚಳಗೊಂಡಿರುವುದು/ (ಇಳಿಮುಖಗೊಂಡಿರುವುದು)				
(ಎ) ವ್ಯಾಪಾರವ್ಯವಹಾರಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಿರುವವುಗಳು	(2,36,43,414)		(1,05,55,004)	
(ಬಿ) ಇತರೆ ಚಾಲ್ತಿ ಜವಾಬ್ದಾರಿಗಳು ಮತ್ತು ಅನುವುಗಳು	1,58,17,912		2,32,95,311	
(i) ಭದ್ರತಾ ಠೇವಣಿಗಳು	22,308		1,025	
(ii)ಮುಂಗಡವಾಗಿ ಪಾವತಿಸಲಾಗಿರುವ ತೆರಿಗೆಗಳು	43,90,678		(48,71,827)	
(iii) ಸರ್ಕಾರಿ ಕಚೇರಿಗಳಲ್ಲಿರುವ ಉಳಿಕೆ ಮೊತ್ತಗಳು – ಪ್ರತಿಭಟನೆಯೊಂದಿಗೆ	–		–	

ಪಾವತಿಸಲಾಗಿರುವ ಸೇವಾ ತೆರಿಗೆ				
(ಗಿ)ಇತರೆ ದೀರ್ಘಾವಧಿ ಜವಾಬ್ದಾರಿಗಳು	34,60,153	(4,31,76,016)	28,07,175	61,13,098
ಕಾರ್ಯಾಚರಣೆಗಳಿಂದ ಉತ್ಪಾದಿಸಲಾದ ಹಣಕಾಸು:		3,37,45,583		43,58,26,412
ಕಳೆಯುವುದು: ಆದಾಯ ತೆರಿಗೆ		(1,16,13,650)		
ಕಾರ್ಯಾಚರಣೆ ಚಟುವಟಿಕೆಗಳಿಂದ ನಿವ್ವಳ ಹಣಕಾಸಿನ ಹರಿವು (ಎ)		**2,21,31,933**		**43,58,26,412**
2. **ಹೂಡಿಕೆ ಚಟುವಟಿಕೆಗಳಿಂದ ಹಣಕಾಸಿನ ಹರಿವು :**				
ಎ. ಸ್ಥಿರಾಸ್ತಿಗಳ ಖರೀದಿ :				
(ಎ)ಸ್ಥಿರಾಸ್ತಿಗಳು – ಗೋಚರ/ಸ್ಪರ್ಶಿಸಬಹುದಾದ	(4,68,20,657)		(52,69,839)	
ಅನುದಾನಗಳಿಂದ ಖರೀದಿಸಲಾದ/ಸ್ವಾಧೀನಪಡಿಸಿ ಕೊಳ್ಳಲಾದ ಆಸ್ತಿಗಳು	(6,76,40,836)		(93,64,307	
(ಬಿ)ಸ್ಥಿರಾಸ್ತಿಗಳು–ಅಗೋಚರ/ಸ್ಪರ್ಶಿಸಲಾಗದ	(3,16,806)		(4,07,500)	
(ಸಿ)ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗಳು	(63,25,840)		(44,46,415)	
(ಡಿ) ಇತರೆ ಚಾಲ್ತಿಯೇತರ ಆಸ್ತಿಗಳು	(1,25,34,701)		(40,98,2435)	
ಕೂಡುವುದು:				
(ಎ) ಸ್ಥಿರಾಸ್ತಿಗಳ ಮಾರಾಟದಿಂದ ಲಾಭ	46,61,546		5,00,185	
(ಬಿ)ಷೇರು ಲಾಭಾಂಶದಿಂದ ಆದಾಯ	8,41,200		8,41,200	
(ಸಿ)ಗಳಿಸಲಾದ ಬಡ್ಡಿ	70,58,576		28,91,588	
ಹೂಡಿಕೆ ಚಟುವಟಿಕೆಗಳಿಂದ ನಿವ್ವಳ ಹಣಕಾಸು (ಬಿ)		**(12,10,77,518)**		**(1,93,53,523)**
3. ಸಾಲಗಳನ್ನು ಪಡೆಯುವುದರಿಂದ /ಹಣಕಾಸು ಚಟುವಟಿಕೆಗಳಿಂದಹಣಕಾಸಿನ ಹರಿವು				
ಚಾಲ್ತಿಯೇತರ ಜವಾಬ್ದಾರಿಗಳು				
(ಎ)ದೀರ್ಘಾವಧಿ ಸಾಲಗಳು	(58,05,346)		(70,83,148)	
(ಬಿ)ಅಲ್ಪಾವಧಿ ಸಾಲಗಳು	–		(1,11,19,168)	
ಬಡ್ಡಿ ಹಾಗೂ ಸಾಲಗಳನ್ನು ಪಡೆಯುವುದಕ್ಕೆ ಸಂಬಂಧಿತ ಶುಲ್ಕಗಳು/ವೆಚ್ಚಗಳು				

ಅವಧಿ ಸಾಲಗಳ ಮೇಲಿನ ಬಡ್ಡಿ	(10,02,715)		(20,91,169)	
ಇತರವುಗಳ ಮೇಲಿನ ಬಡ್ಡಿ	(12,63,519)		(13,24,115	
ಹಣಕಾಸು/ಸಾಲಗಳನ್ನು ಪಡೆಯುವಿಕೆ ಚಟುವಟಿಕೆಗಳಿಂದ ನಿವ್ವಳ ಹಣಕಾಸಿನ ಹರಿವು (ಸಿ)		**(80,71,580)**		**(2,16,17,600)**
ನಗದು/ಹಣಕಾಸು ಮತ್ತು ನಗದು/ಹಣಕಾಸಿಗೆ ಸಮಾನವಾದವುಗಳಲ್ಲಿ ನಿವ್ವಳ ಹೆಚ್ಚಳ್/(ಇಳಿಕೆ) (ಎ+ಬಿ+ಸಿ)		**(10,70,17,165)**		**39,48,55,289**
ಕೂಡುವುದು : ವರ್ಷದ ಪ್ರಾರಂಭದಲ್ಲಿ ಇದ್ದಂತಹ ನಗದು/ಹಣಕಾಸು ಮತ್ತು ನಗದು/ಹಣಕಾಸಿಗೆ ಸಮಾನವಾದವುಗಳು		49,78,39,531		10,29,84,241
		39,08,22,366		**49,78,39,531**
ವರ್ಷದ ಅಂತ್ಯದಲ್ಲಿನ ನಗದು/ಹಣಕಾಸು ಮತ್ತು ನಗದಿಗೆ/ಹಣಕಾಸಿಗೆ ಸಮಾನವಾದವುಗಳು		**39,08,22,366**		**49,78,39,531**

ಟಿಪ್ಪಣಿ :

1. ನಗದು ಮತ್ತು ನಗದಿಗೆ ಸಮಾನವಾದವುಗಳು ಟಿಪ್ಪಣಿ – 18ರ ಪ್ರಕಾರ ನಗದು, ಬ್ಯಾಂಕು ಶಿಲ್ಕುಗಳು ಮತ್ತು ಬ್ಯಾಂಕುಗಳಲ್ಲಿನ ಠೇವಣಿಗಳನ್ನು ಪ್ರತಿನಿಧಿಸುತ್ತವೆ.

2. ಹಣಕಾಸಿನ ಹರಿವಿನ ತ:ಖ್ತೆಯನ್ನು ಲೆಕ್ಕಪತ್ರಗಳನ್ನಿಡುವುದಕ್ಕೆ ಸಂಬಂಧಿತ ಮಾನದಂಡದಲ್ಲಿ ನಿರ್ದಿಷ್ಟಪಡಿಸಿರುವಂತೆ "ಪರೋಕ್ಷ ವಿಧಾನ"ದಲ್ಲಿ ತಯಾರಿಸಲಾಗಿರುವುದು (ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡ – 3)

3. ಆವರಣದ ಒಳಗಿರುವ ಅಂಕಿಸಂಖ್ಯೆಗಳು ಹಣಕಾಸಿನ ಹೊರಹರಿವನ್ನು ಸೂಚಿಸುತ್ತವೆ.

ಲೆಕ್ಕಪತ್ರಗಳ ಜೊತೆಗಿರುವ ಟಿಪ್ಪಣಿಗಳು 1–46 ಹಣಕಾಸು ತ:ಖ್ತೆಗಳ ಅವಿಭಾಜ್ಯ ಭಾಗಗಳಾಗಿರುತ್ತವೆ

ನಮ್ಮ ಅದೇ ದಿನಾಂಕದ ವರದಿಯ ಪ್ರಕಾರ
ಪಿ.ವಿ.ಮೆನನ್ ಅಂಡ್ ಅಸೋಸಿಯೇಟ್ಸ್‌ಗಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್
ಸಂಸ್ಥೆಯ ನೋಂದಣಿ ಸಂಖ್ಯೆ 002066ಎಸ್

ಮಂಡಳಿಯ ನಿರ್ದೇಶಕರುಗಳ ಪರವಾಗಿ
ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

ಪಿ.ವಿ. ಮೆನನ್	ಸಾ ರಾ ಮಹೇಶ್	ಕುಮಾರ ಪುಷ್ಕರ್	ಟಿ.ಕೆ. ಅನಿಲ್ ಕುಮಾರ್
ಪಾಲುದಾರರು	ಗೌರವಾಧ್ಯಕ್ಷರ	ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು
ಸದಸ್ಯತ್ವ ಸಂಖ್ಯೆ 018644	ಡಿಐಎನ್ ಸಂಖ್ಯೆ 01784020	ಡಿನ್ ಸಂಖ್ಯೆ 07606517	ಡಿನ್ ಸಂಖ್ಯೆ 067045770

ಸ್ಥಳ: ಬೆಂಗಳೂರು
ದಿನಾಂಕ: 19.12.2018

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ಹಣಕಾಸು ತ:ಖ್ತೆಗಳ ಅವಿಭಾಜ್ಯ ಅಂಗಗಳಾಗಿರುವ ಟಿಪ್ಪಣಿಗಳು	
ಟಿಪ್ಪಣಿ	**ವಿವರಗಳು**
1	**ಸಾಂಸ್ಥಿಕ ಮಾಹಿತಿ** 6 ಫ್ಲೆಬ್ರವರಿ 1971ರಂದು ಸ್ಥಾಪಿಸಲಾದ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತವು ಕರ್ನಾಟಕ ಸರ್ಕಾರದ ನಿಯಂತ್ರಣದಲ್ಲಿರುವ ಒಂದು ಉದ್ದಿಮೆಯಾಗಿದೆ ಹಾಗೂ ಕರ್ನಾಟಕ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವುದು ಮತ್ತು ಪ್ರೋತ್ಸಾಹಿಸುವುದು ಹಾಗೂ ಅದಕ್ಕೆ ಸಂಬಂಧಿತ ಇತರೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಕಂಪನಿಯು ರಾಜ್ಯಕ್ಕೆ ಭೇಟಿ ಕೊಡುವ ದೇಶೀಯ ಹಾಗೂ ಅಲ್ಲದೇ ವಿದೇಶೀಯ ಪ್ರವಾಸಿಗರಿಗೆ ಸಾರಿಗೆ, ವಸತಿ ಹಾಗೂ ಇತರೆ ಅನುಕೂಲತೆಗಳನ್ನು ಒದಗಿಸುವತ್ತ ತನ್ನ ಗಮನವನ್ನು ಹರಿಸುತ್ತಿದೆ.
2	**ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಹತ್ವಪೂರ್ಣ ಕಾರ್ಯನೀತಿಗಳು:** **I. ಲೆಕ್ಕವನ್ನಿಡುವ ಪದ್ಧತಿ:** ಕಂಪನಿಗಳ ಅಧಿನಿಯಮ ಕಾಯ್ದೆ 2013ರ ಅಡಿಯಲ್ಲಿ ಅಧಿಸೂಚನೆ ನೀಡಿರುವಂತೆ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳಿಗೆ ಸಂಬಂಧಿತ ಸಾಮಾನ್ಯ ನಿರ್ದೇಶನಗಳಲ್ಲಿ ವಿವರಿಸಿರುವ ರೀತಿಯಲ್ಲಿ, ನಿಗಮವು ಸೇವೆಗಳನ್ನು ಒದಗಿಸುವಂತಹ ಕಂಪನಿಗೆ/ಕೈಗಾರಿಕೆಗಳಿಗೆ ಅನ್ವಯಗೊಳ್ಳುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಮಾನದಂಡಗಳನ್ನು ಸರ್ವೇಸಾಮಾನ್ಯವಾಗಿ ಅನುಸರಿಸುತ್ತದೆ. ನಿಗಮವು ವರಮಾನ/ಆದಾಯ ಮತ್ತು ವೆಚ್ಚಗಳನ್ನು ಸಂಚಿತ ಆಧಾರದ ಮೇರೆಗೆ ಪರಿಗಣಿಸುವ ಮೂಲಕ ಸಂಚಿತ ಪದ್ಧತಿಯನ್ನು ಅನುಸರಿಸುವುದು. ಲೆಕ್ಕಪತ್ರಗಳನ್ನು ಮೂಲ ಬೆಲೆಯಲ್ಲಿ ತಯಾರಿಸಲಾಗುವುದು. ನಿರ್ದಿಷ್ಟವಾಗಿ ಉಲ್ಲೇಖಿಸದಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳು ಸರ್ವೇಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿರುವಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ತತ್ವಗಳ ಅನುಸಾರವೇ ಆಗಿರುತ್ತವೆ.
